# BHAGWAN KI DAYA HETU SAUHARD

KANNAD

# ಭಗವಂತನ ದಯೆ

ಕೆಲವು ಮಿತ್ರರು ಈಶ್ವರನ ಸದ್ಗುಣಗಳ ಸಂಬಂಧವಾಗಿ ಬರೆಯುವಂತೆ ನನಗೆ ಹೇಳುತ್ತಾರೆ. ಆದರೆ ಈ ವಿಷಯದಲ್ಲಿ ನಾನು ನನ್ನನ್ನು ಅಸಮರ್ಥನೆಂದು ತಿಳಿದುಕೊಳ್ಳುತ್ತೇನೆ. ಏಕೆಂದರೆ ಈಶ್ವರನ ಸದ್ಗುಣಗಳಿಗೆ ಯಾವ ಎಲ್ಲೆಯೂ ಇಲ್ಲ. ಪ್ರಪಂಚದಲ್ಲಿ ಎಷ್ಟು ಉತ್ತಮ ಗುಣಗಳು ನೋಡಲು, ಕೇಳಲು ಮತ್ತು ಓದಲು ದೊರೆಯುತ್ತವೆಯೋ, ಅವುಗಳೆಲ್ಲಾ ಪರಿಮಿತ-ಎಲ್ಲೆಯುಳ್ಳವು ಮತ್ತು ಆ ಅಪ್ರಮೇಯ-ಸೀಮಾತೀತ ಪರಮಾತ್ಮನ ಒಂದಂಶದ ಮೂಲಕ ಪ್ರಕಾಶವಾಗುತ್ತಿರುವುವು. **'ಏಕಾಂಶೇನ ಸ್ಥಿತೋ ಜಗತ್'** (ಗೀತಾ ೧೦/೪೨) ಪರಮಾತ್ಮನ ಗುಣಗಳ ವರ್ಣನೆಯನ್ನು ಪರಿಪೂರ್ಣ ರೀತಿಯಲ್ಲಿ ಯಾರೂ ಸಹ ಮಾಡಲಾರರು. ವೇದ-ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವುದೆಲ್ಲಾ ಕೇವಲ ಸ್ವಲ್ಪ ಮಾತ್ರ. ಅನ್ಯ ಗುಣಗಳ ಮಾತೇ ಬೇರೆ. ಆ ದಯಾಮಯಿಯ ಕೇವಲ ಒಂದು ದಯೆಯ ವಿಷಯದಲ್ಲಿ ಲಕ್ಷ್ಯ ಕೊಟ್ಟರೆ ಮುಗ್ಧರಾಗಿ ಹೋಗಬೇಕಾಗುತ್ತದೆ. ಓಹೋ! ಆತನ ಅಪಾರ ದಯೆಯ ಆಳಕ್ಕೆ ಯಾರು ತಲುಪಬಲ್ಲರು? ಒಂದು ದಯೆಯ ವರ್ಣನೆಯೇ ಮನುಷ್ಯನಿಗೆ ಅಶಕ್ಯವಾಗಿರುವಾಗ ಸಂಪೂರ್ಣವಾಗಿ ಎಲ್ಲಾ ಸದ್ಗುಣಗಳ ವರ್ಣನೆ ಮಾಡುವುದಂತೂ ಅಸಂಭವ. ಜನರು ಆತನನ್ನು ದಯಾಸಿಂಧು ಎಂದು ಹೇಳುತ್ತಾರೆ, ವೇದ-ಶಾಸ್ತ್ರಗಳೂ ಸಹ ಆತನನ್ನು ದಯಾಸಾಗರ ಎಂದು ಹೇಳಿವೆ; ಆದರೆ ಯೋಚಿಸಿ ನೋಡಿದರೆ ಈ ಉಪಮಾನ ಯಥಾರ್ಥವಾದುದಲ್ಲ, ಇದು ಆತನ ಅಪರಿಮಿತ ದಯೆಯ ಒಂದಂಶ ಮಾತ್ರದ ಪರಿಚಯ. ಏಕೆಂದರೆ ಸಮುದ್ರ ಪರಿಮಿತಿಯುಳ್ಳದ್ದು ಮತ್ತು ಎಲ್ಲಾ ಕಡೆಗಳಿಂದಲೂ ಗಡಿ ಹೊಂದಿರುವುದು. ಆದರೆ ಅಪರಿಮೇಯ ಪರಮಾತ್ಮನ ದಯೆ ಅಪಾರವಾದದ್ದು, ಆದರೊಡನೆ ಅನಂತ ಸಮುದ್ರಗಳ ಹೋಲಿಕೆ

ಯನ್ನೂ ಸಹ ಮಾಡಲಾಗುವುದಿಲ್ಲ. ಯಾರು ಆತನನ್ನು ದಯಾಸಿಂಧು ಮತ್ತು ದಯಾಸಾಗರ ಎಂದು ಹೇಳುತ್ತಾರೆಯೋ ಅವರನ್ನು ನಾನು ಖಂಡಿತ ವಾಗಿಯೂ ನಿಂದಿಸುವುದಿಲ್ಲ. ಕಾರಣ, ಪ್ರಪಂಚದಲ್ಲಿ ಯಾವ ಅತ್ಯಂತ ದೊಡ್ಡವಸ್ತು ನೋಡಲು ಪ್ರತ್ಯಕ್ಷವಾಗಿ ಕಾಣುತ್ತದೆಯೋ ಅದರ ಹೋಲಿಕೆಯನ್ನು ದೊಡ್ಡವುಗಳೊಡನೆ ಮಾಡಿ ಜನರು ತಿಳಿಯಪಡಿಸುತ್ತಾರೆ.

ಮನಸ್ಸು ಮತ್ತು ಬುದ್ಧಿಯು ಎಲ್ಲಿಗೆ ಹೋಗಲಾರದೋ, ಒಂದೇ ಸಲ ಅದರ ವರ್ಣನೆ ಮಾಡಲು ಮಾತುಗಳಿಂದ ಹೇಗೆ ತಾನೇ ಸಾಧ್ಯ? ಆದಾಗ್ಯೂ ಏನೇನು ಅಲ್ಪ ಸ್ವಲ್ಪ ವರ್ಣನೆ ಮಾಡಲಾಗುತ್ತದೆಯೋ ಅದನ್ನು ಮಾತಿ ನಿಂದಲೇ ಮಾಡಲಾಗುತ್ತದೆ, ಅದು ಬೇಕಾದರೆ ಎಷ್ಟೇ ಆಗಿರಲಿ. ಆದುದರಿಂದ ಭಗವಂತನ ದಯೆಯ ಯಾವ ವರ್ಣನೆಯು ಮಾತಿನಿಂದ ಮಾಡಲಾಗಿರುವುದೋ ಅದು ಪರಿಪೂರ್ಣವಲ್ಲ. ಈಶ್ವರನ ದಯೆ ಅದಕ್ಕಿಂತಲೂ ಬಹಳ ಅಪಾರವಾಗಿದೆ. ಪರಮಾತ್ಮನ ದಯೆ ಇಡೀ ಜೀವ-ಸಮುದಾಯದ ಮೇಲೆಲ್ಲಾ ಎಷ್ಟು ಅಪಾರವಾಗಿದೆಯೆಂದರೆ–ಇವರ ತತ್ತ್ವವನ್ನು ತಿಳಿದುಕೊಂಡ ಮನುಷ್ಯನೂ ಸಹ ನಿರ್ಭಯನಾಗಿಬಿಡುತ್ತಾನೆ, ಶೋಕ-ಮೋಹಗಳಿಂದ ಪಾರಾಗಿಬಿಡುತ್ತಾನೆ, ಅಪಾರ ಶಾಂತಿಯನ್ನು ಪಡೆ ಯುತ್ತಾನೆ ಮತ್ತು ಅವನು ಸ್ವತಃ ದಯಾಮಯನೇ ಆಗಿಬಿಡುತ್ತಾನೆ. ಇಂತಹ ಮನುಷ್ಯನ ಕ್ರಿಯೆಗಳಲ್ಲೆಲ್ಲಾ ದಯೆಯೇ ತುಂಬಿರುತ್ತದೆ. ಅವನಿಂದ ಯಾರಿಗೂ ಸಹ ಹಿಂಸೆಯಾಗಲಾರದು.

ದಯಾಮಯೀ ಪರಮಾತ್ಮನ ದಯೆಯು ಎಲ್ಲಾ ಜೀವಿಗಳ ಮೇಲೆ ಎಷ್ಟಿದೆಯೆಂದರೆ ಸಂಪೂರ್ಣವಾಗಿ ಆ ದಯೆಯನ್ನು ಮನುಷ್ಯ ತಿಳಿದು ಕೊಳ್ಳಲಾರನು. ಅವನು ತನ್ನ ತಿಳುವಳಿಕೆಗೆ ಅನುಸಾರವಾಗಿ ತನ್ನ ಮೇಲೆ ಎಷ್ಟೊಂದು ಅತ್ಯಧಿಕ ದಯೆಯಿದೆಯೆಂದು ತಿಳಿದುಕೊಳ್ಳುತ್ತಾನೆಯೋ ಅದೂ ಸಹ ಕೇವಲ ಅಲ್ಪವೇ ಆಗಿರುತ್ತದೆ. ಮನುಷ್ಯನು ಈಶ್ವರನ ದಯೆಯ ಯಥಾರ್ಥವಾದ ಕಲ್ಪನೆಯನ್ನೂ ಸಹ ಮಾಡಲಾರನು. ಭಗವಂತನ ಆ ಅನಂತ ದಯೆಯು ಎಲ್ಲರ ಮೇಲೆಯೂ ಸಮಭಾವದಿಂದ ಗಂಗಾ ಪ್ರವಾಹದಂತೆ ನಿತ್ಯ-ನಿರಂತರ ನಾಲ್ಕೂ ಕಡೆಗಳಿಂದಲೂ ಹರಿಯುತ್ತಾ ಇದೆ.

ಈ ದಯೆಯಿಂದ ಮನುಷ್ಯನು ಎಷ್ಟು ಪ್ರಯೋಜನ ಪಡೆಯಲು ಇಚ್ಛಿಸುತ್ತಾನೆಯೋ ಅಷ್ಟನ್ನೂ ಪಡೆಯಬಹುದು. ದುಃಖದ ಸಂಗತಿಯೆಂದರೆ ಜನರು ಈ ರಹಸ್ಯವನ್ನು ತಿಳಿದುಕೊಂಡಿರದ ಕಾರಣ ವ್ಯಥೆ ಪಡುತ್ತಾರೆ. ಇದು ಅವರ ದಡ್ಡತನ. ನಿತ್ಯ-ನಿರಂತರ ತಂಪಾದ ಸುಮಧುರ ಜಲವನ್ನು ಪ್ರವಾಹಗೊಳಿಸುತ್ತಿರುವ ಭಗವತಿ ಗಂಗಾನದಿಯ ದಡದಲ್ಲಿರುವ ಬಾಯಾರಿದ ಮನುಷ್ಯನು ಅಜ್ಞಾನದ ದೆಸೆಯಿಂದ ನೀರನ್ನು ಕುಡಿಯದೆ ನೀರಡಿಕೆಯಿಂದ ಸಂಕಟಪಡುತ್ತಿರುತ್ತಾನೆ. ಆ ದಡ್ಡನ ಸ್ಥಿತಿಯಂತೆಯೇ ಈ ಜನರ ಸ್ಥಿತಿಯೂ ಆಗಿದೆಯೆಂದು ತಿಳಿದುಕೊಳ್ಳಬೇಕು.

ಈಶ್ವರನ ದಯೆ ಅಪಾರ, ಆದರೆ ಯಾರು ಎಷ್ಟೆಂದು ಭಾವಿಸಿಕೊಳ್ಳುತ್ತಾನೆಯೋ ಅಷ್ಟೇ ದಯೆಯು ಅವನಿಗೆ ಫಲಿಸುತ್ತದೆ. ಆದುದರಿಂದ ಆ ಈಶ್ವರನ ದಯೆಯು ಎಷ್ಟು ಅಧಿಕವಾಗಿ ನಿನ್ನ ಮೇಲಿದೆಯೆಂದು ನೀನು ತಿಳಿದುಕೊಳ್ಳಬಲ್ಲೆಯೋ ಅಷ್ಟೆಂದೇ ತಿಳಿದುಕೊಳ್ಳಬೇಕು. ನಿನ್ನ ಕಲ್ಪನೆ ಎಷ್ಟು ಅಧಿಕವಾಗುವುದೋ, ನಿನಗೆ ಅಷ್ಟೇ ಅಧಿಕ ಲಾಭವುಂಟು. ಭಗವಂತನ ದಯೆಯ ಅಂತರಾಳವು ಯಾರಿಗೂ ಸಿಕ್ಕುವುದಿಲ್ಲ, ಹೇಗೆಂದರೆ ವಿಮಾನದಲ್ಲಿ ಕುಳಿತು ಆಕಾಶದಲ್ಲಿ ಹಾರುವ ಮನುಷ್ಯನಿಗೆ ಆಕಾಶದ ಒಡಲು ಸಿಕ್ಕುವುದಿಲ್ಲ. ಆದರೆ ದಯೆಯ ಕಿಂಚಿತ್ ರಹಸ್ಯವನ್ನು ತಿಳಿದುಕೊಂಡರೂ ಸಹ ಮನುಷ್ಯನು ಕೃತಕೃತ್ಯನಾಗಿ ಹೋಗುವನು. ಅಗಾಧವಾದ ಗಂಗಾಪ್ರವಾಹದಿಂದ ಮನುಷ್ಯನ ಬಾಯಾರಿಕೆಯನ್ನು ಹೋಗಲಾಡಿಸಲು ಒಂದು ತಂಬಿಗೆ ಗಂಗಾಜಲವೇ ಸಾಕಾಗುವಂತೆ, ಆ ಅಪಾರ, ಅಪರಿಮಿತ ದಯಾಸಾಗರನ ದಯೆಯ ಒಂದು ಕಣದಿಂದಲೇ ಮನುಷ್ಯನ ಅನಂತ ಜನ್ಮಗಳ ಶೋಕಾಗ್ನಿ ಶಾಶ್ವತವಾಗಿ ಶಾಂತವಾಗಿಬಿಡುತ್ತದೆ. ಈ ಹೋಲಿಕೆಯೂ ಸಹ ಸಾಲದು, ಏಕೆಂದರೆ ಸಾಧಾರಣವಾಗಿ ನೀರು ಬೇಕೆಂಬ ಬುದ್ಧಿಯಿಂದ ಕುಡಿದ ಗಂಗಾಜಲದ ಒಂದು ತಂಬಿಗೆ ನೀರಿನಿಂದಾದರೋ ಮನುಷ್ಯನ ಬಾಯಾರಿಕೆಯು ಸ್ವಲ್ಪ ಸಮಯದವರೆಗೆ ಶಾಂತವಾಗಿರುತ್ತದೆ. ಆದರೆ ಈಶ್ವರನ ದಯೆಯ ಕಣವೊಂದರಿಂದ ಭಯ, ಶೋಕ ಮತ್ತು ದುಃಖಗಳು ಬಿಡುಗಡೆಯಾಗಿ ಶಾಂತಿ ಮತ್ತು ಪರಮಾನಂದ ಪ್ರಾಪ್ತಿಯು ಶಾಶ್ವತವಾಗಿ ಬಿಡುವುದು.

ಆದುದರಿಂದ ಎಲ್ಲರೂ ಆ ಪರಮೇಶ್ವರನಿಗೆ ಶರಣಾಗಿ ಆತನ ದಯೆಗಾಗಿ ಹುಡುಕಬೇಕು.

ಭಗವಂತನ ದಯೆಯು ಸಂಪೂರ್ಣವಾಗಿ ಯಾವಾಗಲೂ ಮತ್ತು ಎಲ್ಲೆಲ್ಲಿಯೂ ವ್ಯಾಪಿಸಿದೆ. ಸುಖ ಅಥವಾ ದುಃಖ, ಜಯ ಅಥವಾ ಪರಾಜಯ ಯಾವುದೇ ಬರಲಿ, ಅದು ಭಗವಂತನ ದಯೆಯಿಂದ ಪರಿಪೂರ್ಣಗೊಂಡಿದೆ ಮತ್ತು ಸ್ವತಃ ಈಶ್ವರನೇ ಮಾಡಿರುವ ವಿಧಾನವಾಗಿದೆ, ಆತನ ದಯೆ ಈ ರೂಪದಲ್ಲಿ ಪ್ರಕಟವಾಗಿದೆ, ಎಂಬ ಈ ರಹಸ್ಯವನ್ನು ತಿಳಿದುಕೊಂಡಾಗ ಮನುಷ್ಯನಿಗೆ ಸುಖ ಮತ್ತು ವಿಜಯ ದೊರೆತರೆ ಯಾವ ಹರ್ಷ ಉಂಟಾಗುವುದೋ ಅದೇ ದುಃಖ ಮತ್ತು ಪರಾಜಯ ದಲ್ಲಿಯೂ ಸಹ ಉಂಟಾಗುವುದು. ಎಲ್ಲಿಯವರೆಗೆ ಈಶ್ವರನ ವಿಧಾನದಲ್ಲಿ ಸಂತೋಷವಿಲ್ಲವೋ ಮತ್ತು ಸಾಂಸಾರಿಕ ಸುಖ-ದುಃಖಾದಿಗಳು ಬಂದಾಗ ಹರ್ಷ-ಶೋಕಾದಿಗಳುಂಟಾಗುವುವೋ ಆತನಕ ಮನುಷ್ಯನು ಭಗವಂತನ ದಯೆಯ ತತ್ತ್ವವನ್ನು ನಿಜವಾಗಿಯೂ ತಿಳಿದುಕೊಂಡಿರುವುದೇ ಇಲ್ಲ. ಈಶ್ವರನನ್ನು ಕರ್ಮಗಳ ಅನುಸಾರವಾಗಿ ಫಲ ಕೊಡುವವನು, ನ್ಯಾಯವಾದಿ, ಪರಮಪ್ರೇಮಿ, ಪರಮ ಹಿತೈಷಿ ಪರಮ ದಯಾಳು ಮತ್ತು ಸಹೃದಯೀ ಎಂದು ತಿಳಿದುಕೊಂಡಾಗ, ಆತನು ಮಾಡಿರುವ ಎಲ್ಲಾ ವಿಧಾನಗಳಿಂದ ಆನಂದಕ್ಕೆ ಮಿತಿಯೇ ಇರದು. ವಿಷಯಿ ಮತ್ತು ಪಾಮರ ಪುರುಷರ ಹೃದಯದಲ್ಲಿ ಹೆಂಡತಿ-ಮಕ್ಕಳು, ಐಶ್ವರ್ಯ-ಮನೆಗಳು ಇತ್ಯಾದಿ ಗಳ ಪ್ರಾಪ್ತಿಯಿಂದ ಕ್ಷಣಿಕ ಆನಂದವುಂಟಾಗುತ್ತದೆ. ಆದರೆ ದಯೆಯ ರಹಸ್ಯವನ್ನು ತಿಳಿದ ಆ ಮನುಷ್ಯನಿಗೆ ಮಕ್ಕಳ ಉತ್ಪತ್ತಿ ಮತ್ತು ನಾಶದಲ್ಲಿ, ಹಣದ ಲಾಭ ಮತ್ತು ನಷ್ಟದಲ್ಲಿ, ಶರೀರದ ಸ್ವಸ್ಥತೆ ಮತ್ತು ರೋಗ-ರುಜಿನ ಗಳಲ್ಲಿ ಹಾಗೂ ಬೇರೆ ಬೇರೆ ಎಲ್ಲಾ ಪದಾರ್ಥಗಳ ಪ್ರಾಪ್ತಿ ಮತ್ತು ವಿನಾಶಗಳಲ್ಲಿ ಹೇಗೆ ಅವನು ಭಗವಂತನ ದಯೆಯ ಪ್ರಭಾವವನ್ನು ತಿಳಿದುಕೊಳ್ಳುತ್ತಾ ಹೋಗುವನೋ ಹಾಗೆಯೇ ನಿತ್ಯ-ನಿರಂತರ ಉತ್ತರೋತ್ತರ ಅತ್ಯಧಿಕ ಅದ್ಭುತ ಆನಂದ, ಶಾಂತಿ ಮತ್ತು ಸಮಾನತೆಯು ವೃದ್ಧಿಯಾಗುತ್ತಾ ಬರುವುವು.

ಯಾರು ಭಗವಂತನ ದಯೆಯ ಯಥಾರ್ಥ ಪ್ರಭಾವವನ್ನು ತಿಳಿದು ಕೊಳ್ಳುತ್ತಾನೆಯೋ ಅವನ ಉದ್ಧಾರದ ಮಾತೇ ಏನು? ಅವನು ಇತರರಿಗೂ ಸಹ ಮುಕ್ತಿ-ದಾತಾ ಆಗಿಬಿಡುತ್ತಾನೆ. ಏಕೆಂದರೆ ಭಗವತ್ಕೃಪೆಯು ಅಂತಹ ವಸ್ತು. ಆ ಭಗವತ್ಕೃಪೆಯು ಮೂಕನನ್ನು ವಾಚಾಳಿಯಾಗಿ ಮಾಡಿಬಿಡುತ್ತದೆ ಮತ್ತು ಹೆಳವನಿಗೆ ಪರ್ವತವನ್ನೇ ದಾಟುವ ಶಕ್ತಿ ಕೊಡುತ್ತದೆ. ಪ್ರಪಂಚದಲ್ಲಿ ಆಗದೇ ಇರುವಂತಹ ಕೆಲಸವನ್ನು ಆ ದಯೆಯು ಮಾಡಿಸಿಬಿಡುತ್ತದೆ. ಪರಮಾತ್ಮ ಸರ್ವಸಮರ್ಥ, ಆತನಿಗೆ ಯಾವುದೇ ಕೆಲಸವೂ ಸಹ ಅಶಕ್ಯವಾಗಿಲ್ಲ. ಜೀವನು ಎಲ್ಲಾ ಪ್ರಕಾರದಿಂದಲೂ ಅಸಮರ್ಥ, ಆದರೆ ಪರಮೇಶ್ವರನ ದಯೆ ಮತ್ತು ಆಜ್ಞೆಯಿಂದ ಅವನೂ ಸಹ ಬೇಕಾದರೆ ಅದನ್ನು ಮಾಡಬಲ್ಲ. ಸೊಳ್ಳೆಯೂ ಬ್ರಹ್ಮನಾಗಬಲ್ಲದು. ಈಗೊಂದು ಪ್ರಶ್ನೆ ಉದ್ಭವಿಸು ತ್ತದೆ. ಎಲ್ಲಾ ಜೀವಿಗಳ ಮೇಲೆಯೂ ಭಗವಂತನ ದಯೆ ಸಂಪೂರ್ಣವಾಗಿ ಅಪಾರ ಮತ್ತು ಸಮಾನವಾಗಿರುವಾಗ ಅವರ ದುಃಸ್ಥಿತಿ ಏಕೆ? ಇದಕ್ಕೆ ಉತ್ತರ ಹೀಗಿದೆ-ಜನರು ಭಗವಂತನ ದಯೆಯ ಪ್ರಭಾವವನ್ನು ತಿಳಿಯರು. ಒಬ್ಬ ದರಿದ್ರನ ಮನೆಯಲ್ಲಿ ಸ್ಪರ್ಶಮಣಿಯಿದೆ, ಆದರೆ ಅವನಿಗೆ ಸ್ಪರ್ಶಮಣಿಯ ಬಗ್ಗೆ ತಿಳುವಳಿಕೆಯಿಲ್ಲ. ಆದುದರಿಂದ ಬಡತನದ ದುಃಖದಿಂದ ಸಂಕಟ ಪಡುತ್ತಾ ಭಿಕ್ಷೆ ಬೇಡುತ್ತಾ ಅಲೆದಾಡುತ್ತಾನೆ. ಅದರಂತೆಯೇ ದಯೆಯ ತತ್ತ್ವವನ್ನು ತಿಳಿಯದ ಕಾರಣ ಜೀವರುಗಳೆಲ್ಲಾ ದುಃಖಿಗಳಾಗುತ್ತಿದ್ದಾರೆ. ಜನರು ಆ ದಯೆಯ ತತ್ತ್ವವನ್ನು ತಿಳಿದುಕೊಳ್ಳಲು ತತ್ಪರರಾಗಿ ಯತ್ನಿಸ ಬೇಕು. ಪರಮಾತ್ಮನ ದಯೆಯನ್ನು ತಿಳಿದುಕೊಳ್ಳಲು ಮನುಷ್ಯನು ಪರಮೇಶ್ವರನನ್ನು ಸದಾ ಗದ್ಗದ ಸ್ವರದಿಂದ ವಿನಯವಾಗಿ ಪ್ರಾರ್ಥಿಸಿಕೊಳ್ಳ ಬೇಕು. ಪ್ರಾರ್ಥನೆಯಿಂದ, ಭಜನೆ-ಧ್ಯಾನಗಳಿಂದ ಆತನ ದಯೆಯ ಮಹತ್ವವನ್ನು ಕಿಂಚಿತ್ತಾದರೂ ತಿಳಿದುಕೊಂಡಿರುವ ಪುರುಷರ ಸಹವಾಸ ದಿಂದ, ಸತ್-ಶಾಸ್ತ್ರಗಳ ವಿಚಾರದಿಂದ ಮತ್ತು ಪರಮೇಶ್ವರನು ಮಾಡಿರುವ ಸಮಸ್ತ ವಿಧಾನಗಳಲ್ಲಿ ದಯೆಯನ್ನು ಹುಡುಕುವುದರಿಂದ ಮನುಷ್ಯ ಅದರ ತತ್ತ್ವವನ್ನು ತಿಳಿಯಬಲ್ಲ.

ಭಗವಂತನ ದಯೆಯ ತತ್ತ್ವವನ್ನು ತಿಳಿಸಬಲ್ಲ ಮಹಾತ್ಮರು ದೊರೆಯುವುದು ಬಹಳ ಕಷ್ಟವಾದಾಗ್ಯೂ ಪ್ರಯತ್ನ ಮಾಡಬೇಕು. ದಯೆಯ ಮಹತ್ತ್ವವನ್ನು ಸ್ವಲ್ಪ ಮಟ್ಟಿಗಾದರೂ ತಿಳಿದಿರುವ ಮಹಾತ್ಮರು ಕೂಡಾ ತಾವು ತಿಳಿದಿರುವಷ್ಟನ್ನು ಮಾತಿನಿಂದ ವರ್ಣಿಸಲಾರರು. ಏಕೆಂದರೆ ಇಡೀ ಪ್ರಪಂಚದ ದಯೆಯನ್ನು ಒಂದು ಗೂಡಿಸಿದರೂ ಸಹ ಅದು ದಯಾ ಸಾಗರದ ದಯೆಯ ಒಂದು ಕಣಕ್ಕೆ ಸರಿಸಮಾನವಾಗಲಾರದು.

ಯಾರ ಮನೆಯಲ್ಲಿ ಸ್ಪರ್ಶಮಣಿ ಇದೆಯೋ, ಅವನ ದಾರಿದ್ರ್ಯದ ನಾಶ, ಆ ಸ್ಪರ್ಶಮಣಿಯ ಪ್ರಭಾವವನ್ನು ತಿಳಿದ ಕೂಡಲೇ ಉಂಟಾಗುವುದು; ಹಾಗೆಯೇ ಭಗವಂತನ ದಯೆಯ ಪ್ರಭಾವವನ್ನು ತಿಳಿದುಕೊಂಡ ಕೂಡಲೇ ಮನುಷ್ಯನ ಎಲ್ಲಾ ತರಹದ ದುಃಖವು ಪೂರ್ಣವಾಗಿ ನಾಶಹೊಂದುವುದು. ಭಗವಂತನ ದಯೆಯ ಪ್ರಭಾವವನ್ನು ತಿಳಿದವನು ಹೆಜ್ಜೆ-ಹೆಜ್ಜೆಗೂ ಆ ದಯಾಳುವನ್ನು ಸ್ಮರಣೆಮಾಡುತ್ತಾ ನಿತ್ಯ-ನಿರಂತರ ಆನಂದದಲ್ಲಿ ಮುಳುಗಿರುತ್ತಾನೆ. ತನ್ನ ಇಂತಹ ಪ್ರಿಯತಮ, ಸಹೃದಯಿಯನ್ನು ಯಾರಾದರೂ ಹೇಗೆ ತಾನೇ ಮರೆಯಲು ಸಾಧ್ಯ? ಅವನು ಏನೇನು ಮಾಡುತ್ತಾನೆಯೋ ಅದೆಲ್ಲವನ್ನೂ ಆ ಪರಮ ದಯಾಳು ಪರಮೇಶ್ವರನ ಆಜ್ಞಾನುಸಾರವೇ ಮಾಡುತ್ತಾನೆ. ಅವನ ಯಾವ ಕ್ರಿಯೆಯೂ ಸಹ ಪರಮಾತ್ಮನ ಇಚ್ಛೆಗೆ ವಿರುದ್ಧವಾಗಿರದು. ಸಾಧಾರಣವಾದ ಸತ್ಪುರುಷರೇ ತಮ್ಮ ಉಪಕಾರೀ ಮತ್ತು ದಯಾಳುವನ್ನು ಮರೆತು ಅವನ ವಿರುದ್ಧ ಕಾರ್ಯವೆಸಗಲಾರರು. ಅಂದ ಮೇಲೆ ಪರಮಾತ್ಮನ ದಯೆಯ ಪ್ರಭಾವವನ್ನು ತಿಳಿದ ಮಹಾತ್ಮರು ಪರಮಾತ್ಮನನ್ನು ಹೇಗೆ ಮರೆಯಬಲ್ಲರು? ಮತ್ತು ಆತನ ವಿರುದ್ಧ ಯಾವ ಕೆಲಸವನ್ನಾದರೂ ಹೇಗೆ ತಾನೇ ಮಾಡಬಲ್ಲರು? ಅಂತಹ ಮಹಾನುಭಾವರಿಂದ ಮಾಡಲ್ಪಟ್ಟ ಆಚರಣೆಯೇ 'ಸದಾಚಾರ' ಎಂದು ಹೇಳಲ್ಪಡುತ್ತದೆ. ಜನ ಅದನ್ನು ಪ್ರಮಾಣವೆಂದು ಭಾವಿಸಿಕೊಂಡು ಅದರಂತೆ ನಡೆಯುತ್ತಾರೆ.

***ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ।***
***ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥***

(ಗೀತಾ ೩/೨೧)

ಈಗ ದಯೆ ಎಂದು ಯಾವುದನ್ನು ಹೇಳುತ್ತಾರೆ ಎಂದು ತಿಳಿದು ಕೊಳ್ಳಬೇಕು. ದುಃಖಿಯಾದ, ಸಂಕಟಕ್ಕೊಳಗಾದ ಪ್ರಾಣಿಯನ್ನು ನೋಡಿ ಅದರ ದುಃಖ ಮತ್ತು ಸಂಕಟಗಳ ನಿವೃತ್ತಿಗಾಗಿ ಅಂತಃಕರಣದಲ್ಲಿ ದ್ರವಿಸುವ ಭಾವ ಉತ್ಪತ್ತಿಯಾಗುತ್ತದೆ, ಅದರ ಹೆಸರೇ 'ದಯೆ' ಪರಮೇಶ್ವರನ ಈ ದಯೆ ಎಲ್ಲಾ ಪ್ರಾಣಿಗಳ ಮೇಲೆಯೂ ಸಮಾನ ಭಾವದಿಂದ ಸದಾ-ಎಂದೆಂದೂ ಅಪಾರವಾಗಿದೆ. ಪರಮೇಶ್ವರನ ವಿರುದ್ಧವಾಗಿ ಜೀವನು ಎಷ್ಟೇ ಆಚರಣೆ ಮಾಡಲಿ, ಆದರೆ ಆತನು ಅವನನ್ನು ಯಾವಾಗಲೂ ದಯಾದೃಷ್ಟಿಯಿಂದಲೇ ನೋಡುತ್ತಾನೆ. ಇದಕ್ಕೆ ಉಪಯುಕ್ತವಾದ ಯಾವ ಉದಾಹರಣೆಯೂ ನಮಗೆ ಪ್ರಪಂಚದಲ್ಲಿ ದೊರೆಯುವುದಿಲ್ಲ. ತಾಯಿಯ ಉದಾಹರಣೆ ಕೊಡುವುದಾದರೆ, ಅದು ಸ್ವಲ್ಪಮಟ್ಟಿಗೆ ಸರಿಯೂ ಹೌದು. ಬಾಲಕ ಬಹಳ ಅಯೋಗ್ಯ ಮತ್ತು ನೀಚ ಕೆಲಸಮಾಡುವವನು, ದಿನವೂ ತನ್ನ ತಾಯಿಯನ್ನು ಪೀಡಿಸುತ್ತಾನೆ, ಬೈಯ್ಯುತ್ತಾನೆ, ಹೀಗಿದ್ದರೂ ಸಹ ತಾಯಿ ಬಾಲಕನಿಗೆ ಶ್ರೇಯಸ್ಸನ್ನೇ ಕೋರುತ್ತಾಳೆ; ಎಂದಿಗೂ ಅವನ ಪತನ ಅಥವಾ ನಾಶವನ್ನು ಬಯಸುವುದಿಲ್ಲ. ಇದು ಆಕೆಯ ದಯೆ. ಆದರೆ ಭಗವಂತನ ದಯೆಯನ್ನು ತಿಳಿದುಕೊಳ್ಳಲು ಈ ದೃಷ್ಟಾಂತ ಪರಿಪೂರ್ಣವಲ್ಲ. ಅತಿಯಾದ ತೊಂದರೆ ಉಂಟುಮಾಡಿದರೆ ದುಃಖವನ್ನು ಸಹಿಸಿಕೊಳ್ಳಲಾಗದೆಯಿರುವ ಕಾರಣದಿಂದ ಸ್ವಾರ್ಥಪರಳಾದ ತಾಯಿಯೂ ಸಹ ಬಾಲಕನನ್ನು ತ್ಯಜಿಸಿಬಿಡುತ್ತಾಳೆ ಮತ್ತು ಆಗಾಗ್ಗೆ ಅವನಿಗೆ ಅನಿಷ್ಟವನ್ನು ಬಯಸಬಹುದು ಎಂದೂ ಸಹ ಕಂಡು ಬರುತ್ತದೆ. ಆದರೆ ಪರಮ ಪಿತ ಪರಮೇಶ್ವರನ ವಿರುದ್ಧವಾಗಿ ಯಾರಾದರೂ ಎಂತಹ ಆಚರಣೆ ಮಾಡಿದರೂ, ಆತನು ಎಂದಿಗೂ ಅವನನ್ನು ತ್ಯಜಿಸುವುದೂ ಇಲ್ಲ ಮತ್ತು ಅವನಿಗೆ ಅನಿಷ್ಟವನ್ನು ಬಯಸುವುದೂ ಇಲ್ಲ. ಇದು ಆತನ ಪರಮ ದಯಾಳುತನದ ನಿದರ್ಶನ. ವಿರೋಧವಾದ ಆಚರಣೆ ಮಾಡುವವನನ್ನು ಭಗವಂತ ದಂಡಿಸುತ್ತಾನೆ, ಅದೂ ಸಹ ಆತನ ಪರಮ ದಯೆಯೇ ಹೌದು. ಬಾಲಕನ ಅನುಚಿತ ವರ್ತನೆಗೆ ಗುರುಗಳು ಅವನಿಗೆ ಅವನ ಹಿತಕ್ಕಾಗಿಯೇ ಮತ್ತು ಅವನನ್ನು ದುರಾಚಾರದಿಂದ ದೂರಮಾಡು ವುದಕ್ಕಾಗಿಯೇ ದಂಡಿಸುತ್ತಾರೆ ಅಥವಾ ಕಳ್ಳತನ ಮಾಡುವ ಮತ್ತು ದರೋಡೆ

ಮಾಡುವ ಪ್ರಜೆಗೆ ನ್ಯಾಯಾಧಿಕಾರಿ ರಾಜನು ಯಾವ ಉಚಿತವಾದ ಶಿಕ್ಷೆಯನ್ನು ಕೊಡುತ್ತಾನೆಯೋ, ಅದನ್ನು ಗುರುಗಳ ಮತ್ತು ರಾಜನ ದಯೆಯೆಂದೇ ತಿಳಿಯಲಾಗುತ್ತದೆ. ಅದರಂತೆಯೇ ಪರಮಾತ್ಮ ರೂಪಿ ಗುರುವಿನಿಂದ ಮಾಡಲ್ಪಟ್ಟ ದಂಡ ವಿಧಾನವನ್ನೂ ಸಹ ಪರಮ ದಯೆ ಯೆಂದೇ ತಿಳಿದುಕೊಳ್ಳಬೇಕು. ಈ ಉದಾಹರಣೆ ಕೂಡಾ ಪರಿಪೂರ್ಣವಲ್ಲ. ಗುರು ಮತ್ತು ರಾಜರಿಂದ ತಪ್ಪೂ ಸಹ ಆಗುವ ಸಾಧ್ಯತೆಯುಂಟು. ಬೇರೆ ಯಾವುದೋ ಕಾರಣದಿಂದಲೂ ಸಹ ಅವರು ಪ್ರಮಾದವಶ ಶಿಕ್ಷೆ ವಿಧಿಸುತ್ತಾರೆ. ಆದರೆ ಈಶ್ವರನ ದಂಡ-ವಿಧಾನ ಕೇವಲ ದಯೆಯ ಕಾರಣದಿಂದಲೇ ಜರುಗುತ್ತದೆ. ನಾವು ಪರಮಾತ್ಮನ ದಯೆಯನ್ನು ಯೋಚಿಸಿ ದರೆ ನಮಗೆ ಮಾತು-ಮಾತಿಗೂ ಪರಮಾತ್ಮನ ದಯೆಯ ದರ್ಶನವಾಗು ತ್ತದೆ. ಮೊದಲನೆಯದಾಗಿ ಪರಮೇಶ್ವರನ ನಿಯಮದ ಕಡೆ ನೋಡಿರಿ, ಅವು ಎಷ್ಟೊಂದು ದಯೆಯಿಂದ ತುಂಬಿವೆ, ಯಾವುದೇ! ಜೀವಿ ಎಂತಹುದೇ ಪಾಪ ಮಾಡಿರಲಿ, ಅನೇಕ ನೀಚ ಯೋನಿಗಳನ್ನು ಅನುಭವಿಸಿದ ಮೇಲೆ ಅದಕ್ಕೂ ಸಹ ಅಂತ್ಯದಲ್ಲಿ ಪರಮಾತ್ಮನು ಮನುಷ್ಯ ಶರೀರವನ್ನು ಕೊಟ್ಟೇ ಕೊಡುತ್ತಾನೆ. ಅವನ ಪಾಪಗಳ ಕಡೆ ಗಮನ ಕೊಡುವುದಾದರೆ ಅವನಿಗೆ ಮಾನವ ಶರೀರ ದೊರೆಯಲು ಬಹಳಷ್ಟು ಕಡಿಮೆ ಅವಕಾಶವಿರುತ್ತದೆ. ಆದರೆ ಇದು ಆ ಪರಮಾತ್ಮನ ಕಾರಣರಹಿತ ಪರಮ ದಯೆಯ ಕಾರ್ಯವಾಗಿದೆ, ಪುನಃ ಅವನಿಗೆ ಮನುಷ್ಯ ಶರೀರವನ್ನು ಕರುಣಿಸಿ ಸುಧಾರಣೆಗೆ ತಕ್ಕ ಅವಕಾಶವನ್ನೂ ಕೊಡುತ್ತಾನೆ.

ಗೋಸ್ವಾಮಿ ತುಳಸೀದಾಸ್ ಜೀ ಹೇಳಿದ್ದಾರೆ-

***ಆಕರ ಚಾರಿ ಲಚ್ಛ ಚೌರಾಸೀ। ಜೋನಿ ಭ್ರಮತ ಯಹ ಜೀವ ಅಬಿನಾಸೀ॥***

***ಕಬಹುಕ ಕರಿ ಕರುಣಾ ನರ ದೇಹೀ। ದೇತ ಈಸ ಬಿನು ಹೇತು ಸನೇಹೀ॥***

ಎರಡನೇ ನಿಯಮ-ಯಾರೇ ಆಗಲಿ ಎಂತಹ ಪಾಪಿಯೇ ಆಗಿರಲಿ, ಅವನು ಭಗವಂತನಿಗೆ ಶರಣಾಗತನಾಗಿ ಹೋದಾಗ ಅರ್ಥಾತ್ ಎಂದಿನಿಂದ

ಸಂಪೂರ್ಣವಾಗಿ ಪಾಪಕಾರ್ಯಗಳನ್ನು ಬಿಟ್ಟು ಭಗವಂತನಿಗೆ ಅನುಕೂಲನಾಗಿ ಹೋಗುತ್ತಾನೆಯೋ ಆಗ ಭಗವಂತನು ಅವನ ಹಿಂದಿನ ಪಾಪಗಳನ್ನೆಲ್ಲಾ ನಾಶ ಮಾಡಿ ಅವನಿಗೆ ತತ್ಕಾಲದಲ್ಲಿಯೇ ಮುಕ್ತಿಯನ್ನು ಕೊಟ್ಟುಬಿಡುತ್ತಾನೆ. ಭಗವಾನ್ ಶ್ರೀರಾಮ ಹೇಳುತ್ತಾನೆ-

***ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ।***
***ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ॥***

(ವಾ.ರಾ. ೬/೧೮/೩೩)

ಮೂರನೇ ವಿಧಿ ಹೀಗಿದೆ- ಒಬ್ಬ ಅತ್ಯಂತ ಸಾಧಾರಣ ಮನುಷ್ಯನೂ ಸಹ ಪರಮಾತ್ಮನನ್ನು ಪ್ರೀತಿಯಿಂದ ಭಜಿಸಿದರೆ, ಪರಮೇಶ್ವರನೂ ಸಹ ಅವನನ್ನು ಅದೇ ಪ್ರಕಾರ ಭಜಿಸುತ್ತಾನೆ.

***'ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್''***

(ಗೀತಾ ೪/೧೧)

ಇಷ್ಟೇ ಅಲ್ಲ, ಪರಮೇಶ್ವರನ ಭಜನೆಯ ಪ್ರತಾಪದಿಂದ ಅವನು ಹಿಂದೆ ಮಾಡಿದ್ದ ಪಾಪಗಳೆಲ್ಲಾ ನಾಶವಾಗುತ್ತವೆ ಮತ್ತು ಅವನು ಬಹು ಬೇಗ ಪರಮ ಧರ್ಮಾತ್ಮನಾಗಿ ದುರ್ಲಭವಾದ ಪರಮಗತಿಯನ್ನು ಪಡೆಯುತ್ತಾನೆ. ಭಗವಂತ ಶ್ರೀಕೃಷ್ಣನ ವಚನಗಳಿವು-

***ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್।***
***ಸಾಧುರೇವ ಸ ಮಂತವ್ಯಃ ಸಮ್ಯಗ್ ವ್ಯವಸಿತೋ ಹಿ ಸಃ॥***
***ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ।***
***ಕೌಂತೇಯ ಪ್ರತಿ ಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ॥***

(ಗೀತಾ ೯/೩೦,೩೧)

ಪರಮೇಶ್ವರನಲ್ಲಿ ಭಕ್ತಿಯಿಟ್ಟಿರುವವನ ರಕ್ಷಣೆ ಮತ್ತು ಸಹಾಯವನ್ನು ಎಲ್ಲಾ ರೀತಿಯಿಂದಲೂ ಆತನೇ ಮಾಡುತ್ತಾನೆ ಮತ್ತು ಉಚಿತವಾದ ಬುದ್ಧಿಯನ್ನು ಕೊಟ್ಟು ಈ ನಿಸ್ಸಾರವಾದ ಪ್ರಪಂಚದಿಂದ ಅವನ ಉದ್ಧಾರವನ್ನೂ ಮಾಡಿಬಿಡುತ್ತಾನೆ.

ಈ ನಿಯಮಗಳಲ್ಲಿ ಪರಮಾತ್ಮನ ಎಷ್ಟೊಂದು ದಯೆ ತುಂಬಿದೆ

ಯೆಂಬುದನ್ನು ನೀವೇ ಯೋಚಿಸಿರಿ. ಇಷ್ಟೇ ಅಲ್ಲ, ಭಗವಂತನ ಎಲ್ಲಾ ನಿಯಮಗಳೂ ಇದೇ ಪ್ರಕಾರ ದಯಾಪೂರ್ಣವಾಗಿವೆ. ಲೇಖನದ ವಿಸ್ತಾರ-ಭಯದಿಂದ ಇಲ್ಲಿ ಬರೆಯಲಾಗಿಲ್ಲ, ಇಂತಹ ದಯೆಯಿಂದ ತುಂಬಿದ ನಿಯಮ ಪ್ರಪಂಚದಲ್ಲಿ ತಾಯಿ, ತಂದೆ, ಗುರು, ರಾಜ ಮುಂತಾದ ಯಾರಲ್ಲಿಯೂ ಸಹ ಇಲ್ಲ.

ಈಗ ಬೇರೆ ಕಡೆಗೆ ಗಮನ ಕೊಡಿ, ಈಶ್ವರನು ನಮ್ಮ ಅನುಕೂಲ ಕ್ಕಾಗಿಯೇ ಪ್ರಪಂಚದಲ್ಲಿ ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ ಇತ್ಯಾದಿ ಎಂತೆಂತಹ ಅದ್ಭುತ ವಸ್ತುಗಳನ್ನು ರಚಿಸಿದ್ದಾನೆ; ಅವುಗಳಿಂದ ನಾವು ಸುಖವಾಗಿ ಜೀವನ ರೂಪಿಸಿಕೊಂಡಿರುತ್ತೇವೆ ಮತ್ತು ಸುಖ ವಾಗಿದ್ದೇವೆ. ಈ ವಸ್ತುಗಳೆಲ್ಲಾ ಎಲ್ಲರಿಗೂ ಬೆಲೆಯಿಲ್ಲದೇ, ಯಾವ ಅಡೆ-ತಡೆಗಳಿಲ್ಲದಂತೆ ಸಾಕಷ್ಟು ಸಮಾನಭಾವದಿಂದ ಸಹಜವಾಗಿಯೇ ದೊರೆಯುತ್ತವೆ. ಎಂತಹ ಮಹಾಪಾಪಿಯೇ ಆಗಿರಲಿ, ಭಗವಂತನ ಈ ದಾನದಿಂದ ಅವನು ವಂಚಿತನಾಗಿರುವುದಿಲ್ಲ. ಪ್ರಪಂಚದಲ್ಲಿ ವಿಷಯಗಳ ರಚನೆಯನ್ನೂ ಸಹ ಈಶ್ವರನೇ ಈ ಮಾದರಿಯಲ್ಲಿ ಮಾಡಿದ್ದಾನೆ, ಅವುಗಳ ಸ್ಥಿತಿಯ ಬಗ್ಗೆ ಯೋಚಿಸುವುದರಿಂದಲೂ ಸಹ ಬಹಳ ಉಪದೇಶ ದೊರೆಯುತ್ತದೆ. ನಾವು ಯಾವ-ಯಾವ ವಸ್ತುವಿನ ಕಡೆಗೆ ದೃಷ್ಟಿ ಹರಿಸುತ್ತೇವೆಯೋ ಅದು ಕ್ಷಯವಾಗುವುದು ಮತ್ತು ನಾಶ ವಾಗುವುದು ಕಂಡುಬರುತ್ತದೆ. ಇದೂ ಸಹ ದಯೆಯ ಒಂದು ನಿದರ್ಶನವೇ ಆಗಿದೆ. ಪ್ರಪಂಚದ ಈ ಎಲ್ಲಾ ಪದಾರ್ಥಗಳನ್ನು ನೋಡುವುದರಿಂದ, ಹೆಂಡತಿ, ಮಗ, ಹಣ, ಪ್ರಪಂಚದ ಎಲ್ಲಾ ಪದಾರ್ಥಗಳು ಮತ್ತು ನಮ್ಮ ಶರೀರವೂ ಸಹ ಕ್ಷಣಭಂಗುರವಾದದ್ದು ಮತ್ತು ನಾಶವಾಗತಕ್ಕವು ಎಂಬ ಉಪದೇಶ ದೊರೆಯುತ್ತದೆ. ಆದುದರಿಂದ ನಮ್ಮ ಅಮೂಲ್ಯವಾದ ಸಮಯವನ್ನು ಈ ವಿಷಯಗಳನ್ನು ಅನುಭವಿಸುವುದರಲ್ಲಿಯೇ ವ್ಯರ್ಥವಾಗಿ ಕಳೆಯಬಾರದು ಎಂಬುದು ನಮಗೆ ಸರಿಯಾದ ಸಲಹೆ.

ಪರಮಾತ್ಮನ ದಯೆಯು ಸಮಾನಭಾವದಿಂದ ಎಲ್ಲರಮೇಲೆಯೂ ಸದಾ ಇದ್ದೇ ಇದೆ, ಆದರೆ ಮನುಷ್ಯನು ಪರಮಾತ್ಮನಲ್ಲಿ ಶರಣಾಗತನಾದಾಗ

ಆತನು ಅವನ ಮೇಲೆ ವಿಶೇಷವಾದ ದಯೆಯಿಡುತ್ತಾನೆ. ಅಕ್ಕಸಾಲಿಗನು ಬಂಗಾರವನ್ನು ಅಗ್ನಿಯಲ್ಲಿ ಕಾಯಿಸಿ ಪವಿತ್ರಗೊಳಿಸುವಂತೆಯೇ, ಪರಮಾತ್ಮನು ತನ್ನ ಭಕ್ತನನ್ನು ಅನೇಕ ಪ್ರಕಾರದ ಸಂಕಟಗಳ ಮೂಲಕ ತಪ್ಪಿಸಿ ಪವಿತ್ರಗೊಳಿಸುತ್ತಾನೆ. ಭಕ್ತ ಪ್ರಹ್ಲಾದನು ಭಗವಂತನಿಗೆ ಶರಣಾದಾಗ ಮೊದ-ಮೊದಲು ಅವನಿಗೆ ಎಂತೆಂಥಹ ವಿಪತ್ತುಗಳು ಬಂದವು! ಅವನು ಬೆಂಕಿಯಲ್ಲಿ ಸುಡಲ್ಪಟ್ಟನು, ನೀರಿನಲ್ಲಿ ಮುಳುಗಿಸಲ್ಪಟ್ಟನು, ವಿಷ ಕುಡಿಸಲಾಯ್ತು. ಶಸ್ತ್ರಗಳಿಂದ ಕತ್ತರಿಸಲ್ಪಟ್ಟನು. ಆದರೆ ಅವನಿಗೆ ಸಂಕಟಗಳು ಹೆಚ್ಚಿದಂತೆಲ್ಲಾ ದಯೆಯ ಅನುಭವವೂ ಸಹ ಹೆಚ್ಚುತ್ತಾ ಬಂತು. ಈ ಕಾರಣದಿಂದ ಅವನು ಪರಮಪವಿತ್ರನಾಗಿ ಕಡೆಗೆ ಪರಮಾತ್ಮನ ಸಾನ್ನಿಧ್ಯವನ್ನೇ ಪಡೆದುಕೊಂಡನು. ಜನರ ದೃಷ್ಟಿಯಲ್ಲಿನ ಮಾತು ಹೀಗಿವೆ-ಪ್ರಹ್ಲಾದನು ಬಹಳ ದುಃಖವನ್ನು ಅನುಭವಿಸಬೇಕಾಯ್ತು, ಅವನ ಮೇಲೆ ಅನೇಕ ಅತ್ಯಾಚಾರಗಳು ಜರುಗಿದವು. ಅವನು ದೊಡ್ಡ-ದೊಡ್ಡ ವಿಪತ್ತುಗಳನ್ನು ಎದುರಿಸಬೇಕಾಯ್ತು. ಭಗವಂತನಲ್ಲಿ ಭಕ್ತಿಯಿಟ್ಟಿರುವವರಿಗೆ ಭಗವಂತನು ಉತ್ತರೋತ್ತರ ಅತಿಯಾದ ವಿಪತ್ತುಗಳನ್ನೇ ಕೊಡುತ್ತಾನೆ- ಎಂದು ಕೆಲವು ಮುಗ್ಧರು ಹೇಳುತ್ತಾರೆ. ಆದರೆ ಭಗವಂತನ ವಿಧಾನದಲ್ಲಿ ಮಾಡಲಾಗಿರುವ ಈ ವಿಪತ್ತುಗಳಲ್ಲಿ ಎಷ್ಟು ಹೆಚ್ಚಿನ ಸಂಪತ್ತು ಅಡಗಿದೆಯೆಂಬುದು ಆ ಮುಗ್ಧರಿಗೇನು ಗೊತ್ತು?

ಪ್ರಹ್ಲಾದನು ಈ ತತ್ತ್ವವನ್ನು ತಿಳಿದುಕೊಂಡಿದ್ದನು. ಆದುದರಿಂದ ಅವನಿಗೆ ಈ ವಿಪತ್ತುಗಳಲ್ಲಿ ಭಗವಂತನ ದಯಾರೂಪಿ ಸಂಪತ್ತಿನ ಪ್ರತ್ಯಕ್ಷ ದರ್ಶನವಾಗುತ್ತಿತ್ತು. ಭಕ್ತ ಪ್ರಹ್ಲಾದನಂತೆ ವಿಪತ್ತುಗಳಲ್ಲಿ ಪರಮಾತ್ಮನ ದಯೆಯನ್ನು ನೋಡುವ ಮನುಷ್ಯನಿಗೆ ಆ ವಿಪತ್ತುಗಳೆಲ್ಲಾ ತತ್ಕಾಲದಲ್ಲಿಯೇ ಸಂಪತ್ತಿನ ರೂಪಕ್ಕೆ ಪರಿವರ್ತನೆಗೊಳ್ಳುತ್ತವೆ.

ನೀವು ಪ್ರಹ್ಲಾದನ ಚರಿತ್ರೆಯನ್ನು ಓದಿ, ಅವನ ವಚನಗಳಲ್ಲಿ ಪದ-ಪದದಲ್ಲಿಯೂ ಎಷ್ಟೊಂದು ಧೈರ್ಯ, ನಿರ್ಭಯತೆ, ಶಾಂತಿ, ನಿಃಸ್ಪೃಹತೆ, ನಿಷ್ಕಾಮಭಾವ ಮತ್ತು ಆನಂದ ಮಿಂಚುತ್ತದೆ. ಅಗ್ನಿಯಲ್ಲಿ

ಸುಡದೆ ಪ್ರಹ್ಲಾದ ಹೇಳುತ್ತಾನೆ-

***ತಾತೈಷ ವಹ್ನಿಃ ಪವನೇರಿತೋಽಪಿ***
***ನ ಮಾಂ ದಹತ್ಯತ್ರ ಸಮನ್ತತೋಽಹಮ್॥***
***ಪಶ್ಯಾಮಿ ಪದ್ಮಾಸ್ತರಣಾಸ್ತೃತಾನಿ***
***ಶೀತಾನಿ ಸರ್ವಾಣಿ ದಿಶಾಮ್ಮುಖಾನಿ॥***

(ವಿಷ್ಣು ೧/೧೭/೪೭)

'ಓ ತಂದೆಯೇ! ಈ ಮಹಾನ್ ವಾಯುವಿನಿಂದ ಪ್ರೇರಿತವಾದ ಧಗಧಗಿಸುವ ಬೆಂಕಿಯೂ ಸಹ ನನ್ನನ್ನು ಸುಡುವುದಿಲ್ಲ (ಇದಕ್ಕೆ ನೀವು ಯಾರೂ ಆಶ್ಚರ್ಯಪಡಬೇಕಾಗಿಲ್ಲ) ಏಕೆಂದರೆ ನಾನು ಈ ಬೆಂಕಿಯಲ್ಲಿ ಮತ್ತು ನನ್ನಲ್ಲಿ ಸಮಭಾವನೆಯಿಂದ ಆ ಏಕಮಾತ್ರ ಸರ್ವವ್ಯಾಪಿ ಭಗವಂತನಾದ ವಿಷ್ಣುವನ್ನು ನೋಡುತ್ತೇನೆ, ಆದುದರಿಂದ ಬೆಂಕಿಯ ಈ ಜ್ವಾಲೆಗಳು ನನ್ನ ಸುತ್ತಲೂ ತಂಪಾದ ಕಮಲ ಪತ್ರಗಳಂತೆ ಹರಡಿಕೊಂಡು ಸುಖದಾಯಕ ವಾಗಿವೆ.'

ಗುರುಪುತ್ರ ಶಂಡಾಮರ್ಕನಿಂದ ಉತ್ಪತ್ತಿಮಾಡಲ್ಪಟ್ಟ ಕೃತ್ಯಾ ಪ್ರಹ್ಲಾದ ನನ್ನು ಕೊಲ್ಲಲು ಅಸಮರ್ಥವಾಗಿ ಶಂಡಾಮರ್ಕನನ್ನೇ ಕೊಂದುಹಾಕಿದಾಗ ದಯಾಮಯಿ ಪ್ರಹ್ಲಾದನು ಭಗವಂತನೊಡನೆ ಹೇಳತೊಡಗಿದ-

***ಯಥಾ ಸರ್ವಗತಂ ವಿಷ್ಣುಂ ಮನ್ಯಮಾನೋಽನಪಾಯಿನಮ್।***
***ಚಿಂತಯಾಮ್ಯರಿಪಕ್ಷೇಽಪಿ ಜೀವಂತ್ವೇತೇ ಪುರೋಹಿತಾಃ॥***
***ಯೇ ಹಂತುಮಾಗತಾ ದತ್ತಂ ಯೈರ್ವಿಷಂ ಯೈರ್ಹುತಾಶನಃ।***
***ಯೈರ್ದಿಗ್ಗಜೈರಹಂ ಕ್ಷುಣ್ಣೋ ದಷ್ಟಃ ಸರ್ಪೈಶ್ಚ ಯೈರಪಿ॥***
***ತೇಷ್ವಹಂ ಮಿತ್ರಭಾವೇನ ಸಮಃ ಪಾಪೋಽಸ್ಮಿ ನ ಕ್ವಚಿತ್।***
***ತಥಾ ತೇನಾದ್ಯ ಸತ್ಯೇನ ಜೀವಂತ್ವಸುರಯಾಜಕಾಃ॥***

(ವಿಷ್ಣು ೧/೧೮/೪೧-೪೩)

'ಸರ್ವಗತ ಮತ್ತು ಅಕ್ಷಯ ಶ್ರೀವಿಷ್ಣುವನ್ನು ನಾನು ಶತ್ರು-ಪಕ್ಷದ ಲ್ಲಿಯೂ ಸಹ ನೋಡುತ್ತೇನೆ ಎಂಬುದಾದರೆ ಈ ಪುರೋಹಿತರು ಬದುಕಿ ಉಳಿಯಲಿ. ಯಾರು ನನ್ನನ್ನು ಕೊಲ್ಲಲು ಬಂದರೋ, ಯಾರು ವಿಷ

ಕೊಟ್ಟರೋ, ಬೆಂಕಿಗೆ ನೂಕಿದರೋ, ಯಾವ ದಿಗ್ಗಜಗಳು ತುಳಿದುವೋ, ಸರ್ಪಗಳು ಕಚ್ಚಿದವೋ, ಅವರೆಲ್ಲರಲ್ಲಿಯೂ ನಾನು ಮಿತ್ರಭಾವದಿಂದ ಸಮಾನವಾಗಿದ್ದೇನೆ ಮತ್ತು ಎಲ್ಲಿಯೂ ಸಹ ನನಗೆ ಪಾಪ ಬುದ್ಧಿಯಿಲ್ಲದಿದ್ದರೆ ಆ ಸತ್ಯದ ಪ್ರಭಾವದಿಂದ ಈ ಕೂಡಲೇ ಈ ಪುರೋಹಿತರು ಜೀವಂತರಾಗಲಿ'. ಅನಂತರ ಪುರೋಹಿತರು ಜೀವಂತ ಎದ್ದು ಕುಳಿತರು.

ಸಾಧನೆಯ ಕಾಲದಲ್ಲಿ ಭಗವಂತನು ತನ್ನ ಭಕ್ತರಿಗೆ ಯಾವ ವಿಪತ್ತನ್ನು ಉಂಟುಮಾಡುತ್ತಾ ಇರುವಂತೆ ಕಾಣುತ್ತೇವೆಯೋ ಮತ್ತು ಯಾರ-ಯಾರ ಮಾನ, ಹೊಗಳಿಕೆ, ಪ್ರತಿಷ್ಠೆ ಮತ್ತು ಸಂಪತ್ತನ್ನು ಸಹ ಕಿತ್ತುಕೊಳ್ಳುತ್ತಾನೆಯೋ, ಅದು ಏತಕ್ಕೋಸ್ಕರ? ಅವರನ್ನು ಅಜ್ಞಾನರೂಪಿ ನಿದ್ರೆಯಿಂದ ಎಚ್ಚರ ಗೊಳಿಸುವುದಕ್ಕಾಗಿ, ಸಾಧನೆಗಿರುವ ಅಡಚಣೆಗಳನ್ನು ಹೋಗಲಾಡಿಸು ವುದಕ್ಕಾಗಿ, ಪಾಪಗಳಿಂದ ಪವಿತ್ರಗೊಳಿಸುವುದಕ್ಕಾಗಿ, ಹೇಡಿತನವನ್ನು ನಾಶ ಮಾಡಿ ಅವರನ್ನು ವೀರರು ಮತ್ತು ಧೀರರನ್ನಾಗಿ ಮಾಡುವುದಕ್ಕಾಗಿ. ನಿಜವಾದ ಭಕ್ತಿಯನ್ನು ವೃದ್ಧಿಪಡಿಸುವುದಕ್ಕಾಗಿ ಮತ್ತು ಅವರ ಅಂತಹ ಸ್ವಚ್ಛ-ಕೀರ್ತಿಯನ್ನು ಪ್ರಚಾರ ಮಾಡುವುದಕ್ಕಾಗಿ, ಅದನ್ನು ಹಾಡಿ-ಹಾಡಿ ಜನರು ಪವಿತ್ರರಾಗಿ ಹೋಗಲಿ ಎಂದು. ಏಕೆಂದರೆ ಸಂಕಟದ ಕಾಲದಲ್ಲಿ ಭಗವಂತ ಎಷ್ಟು ಜ್ಞಾಪಕಕ್ಕೆ ಬರುತ್ತಾನೆಯೋ ಅಷ್ಟು ಸಂಪತ್ತಿನ ಕಾಲದಲ್ಲಿ ಬರುವುದಿಲ್ಲ. ಆದುದರಿಂದ ಕುಂತೀದೇವಿಯು ಭಗವಂತನಲ್ಲಿ ವಿಪತ್ತಿನ ವರವನ್ನು ಕೇಳಿದ್ದಳು.

***ವಿಪದಃ ಸಂತು ನಃ ಶಶ್ವತ್ತತ್ರ ತತ್ರ ಜಗದ್ಗುರೋ।***
***ಭವತೋ ದರ್ಶನಂ ಯತ್ಸ್ಯಾದಪುನರ್ಭವದರ್ಶನಮ್॥***

(ಶ್ರೀಮದ್ಭಾ ೧/೮/೨೫)

'ಹೇ ಜಗದ್ಗುರುವೇ! ಹೆಜ್ಜೆ-ಹೆಜ್ಜೆಗೂ ಯಾವಾಗಲೂ ನಮಗೆ ವಿಪತ್ತುಗಳೇ ಬರಲಿ ಎಂದು ನಾವು ಇಚ್ಛಿಸುತ್ತೇವೆ. ಅವುಗಳಿಂದ ನಮಗೆ ಪ್ರಪಂಚದಿಂದ ಬಿಡುಗಡೆ ಮಾಡಿಸುವ ನಿನ್ನ ದುರ್ಲಭ ದರ್ಶನ ದೊರೆಯುತ್ತಿರಲಿ'.

ಆದರೆ ನೀವು ಗಮನವಿಟ್ಟು ನೋಡಿದರೆ ನಿರಂತರ-ಅನವರತ ಆ ಪರಮಾತ್ಮನ ದಯೆಯ ವರ್ಷಧಾರೆಯಾಗುತ್ತಿರುತ್ತದೆ. ಈ ವರ್ಷಾಕಾಲದ ಶೀತಲ ಸುಧಾಧಾರೆಯ ಆನಂದವು ಭಗವಂತನಿಗೆ ಶರಣಾಗಿ ಆತನ ದಯೆಯ ಕಡೆಗೆ ಧ್ಯಾನ ಹರಿಸುವವರಿಗೆ ದೊರೆಯುತ್ತದೆ. ಯಾವಾಗಲೂ ಇಂತಹ ದಯಾ-ವೃಷ್ಟಿಯಾಗುತ್ತಿದ್ದರೂ ಸಹ ಆತನ ದಯೆಯ ಪ್ರಭಾವವನ್ನು ತಿಳಿಯದೇ ಇರುವ ಕಾರಣದಿಂದ ಜನರು ಅದರ ಲಾಭವನ್ನು ಪಡೆದು ಕೊಳ್ಳಲಾರರು. ಕೆಲವರು ಮೂರ್ಖತನದಿಂದ ಛತ್ರಿ ಹಿಡಿದುಕೊಳ್ಳುತ್ತಾರೆ ಮತ್ತೆ ಕೆಲವರು ಮನೆಗೆ ನುಗ್ಗಿಬಿಡುತ್ತಾರೆ. ಒಮ್ಮೊಮ್ಮೆ ಪರಮಾತ್ಮನ ವಿಶೇಷ ದಯೆಯಿಂದ, ಪೂರ್ವ ಪುಣ್ಯದ ರಾಶಿಯ ಕಾರಣದಿಂದ ಆತನ ಪ್ರೇಮ, ಪ್ರಭಾವ, ಗುಣ ಮತ್ತು ರಹಸ್ಯದ ಅಮೃತರೂಪೀ ಕಥೆಯು ಇಚ್ಛಿಸದೆ ಮತ್ತು ಪ್ರಯತ್ನಿಸದೆ ಇದ್ದರೂ ತಾನೇತಾನಾಗಿ ಬಂದೊದಗುತ್ತದೆ. ಅವರ ತತ್ತ್ವವನ್ನು ತಿಳಿಯದೇ ಇರುವುದರಿಂದ ಉಪೇಕ್ಷೆಮಾಡಿ ಹೊರಟು ಹೋಗುವ ಮನುಷ್ಯ ಅಮೃತರೂಪೀ ಮಳೆಯಿಂದ ಓಡಿ ಮನೆಯೊಳಗಡೆ ಹೋದಂತೆ ಮತ್ತು ಕಥೆಯನ್ನು ಕೇಳುತ್ತಿದ್ದರೂ ಸೋಮಾರಿತನ ಮತ್ತು ನಿದ್ರೆಗಳಿಗೆ ದಾಸನಾದವನು ತನ್ನ ಮೇಲೆ ಛತ್ರಿ ಹಿಡಿದುಕೊಂಡಂತೆ.

ಈಶ್ವರನ ದಯೆಯನ್ನು ಹೇಳುವುದೇನು? ಇಡೀ ಜೀವಿಗಳ ತಲೆಯ ಮೇಲೆ ಯಾವಾಗಲೂ ಆತನ ಹಸ್ತವಿರುತ್ತದೆ. ಆದರೆ ನಿರ್ಭಾಗ್ಯರಾದ ಜೀವರು ಆ ಹಸ್ತವನ್ನು ತಳ್ಳಿ ದೂರಮಾಡಿಬಿಡುತ್ತಾರೆ.

ಈ ಜೀವನು ಯಾವುದಾದರೂ ಕೆಟ್ಟ ಕೆಲಸ ಮಾಡಲು ಉದ್ಯುಕ್ತ ನಾದಾಗ ಬಹುಶಃ ಅವನ ಹೃದಯದಿಂದ-'ಇದು ಕೆಟ್ಟ ಕೆಲಸ' ಎಂಬ ಶಬ್ದ ಬರುತ್ತದೆ. ಈ ರೀತಿಯಲ್ಲಿ ಬರುವ ಎಚ್ಚರಿಕೆಯೇ ಈಶ್ವರನು ತಲೆಯಮೇ ಲಿಟ್ಟಿರುವ ಹಸ್ತ. ಈಶ್ವರನು ಅವನಿಗೆ ಸರಿಯಾದ ಸಮಯದಲ್ಲಿ ಎಚ್ಚರಿಕೆ ನೀಡುತ್ತಾನೆ. ಹೃದಯದಲ್ಲಿ ಅಡಗಿರುವ ಯಾರೋ ಒಬ್ಬ ಪುರುಷನು-'ಈ ಕೆಲಸ ಕೆಟ್ಟದ್ದು' ಎಂಬುದಾಗಿ ತಡೆಯುತ್ತಿರುವಂತೆ ಭಾಸವಾಗುತ್ತದೆ. ಆದರೆ ಆಶೆ ಅಥವಾ ಲೋಭಕ್ಕೆ ವಶವರ್ತಿಯಾಗಿ ಈಶ್ವರನ ಆಜ್ಞೆಯನ್ನು ಅವಹೇಳನಮಾಡಿ ಕೆಟ್ಟ ಕೆಲಸದಲ್ಲಿ ತೊಡಗುತ್ತಾನೆ; ಇದೇ ಆ ಕೃಪಾಸಿಂಧು

ವಿಸ ಕೃಪೆಯ ಅವಹೇಳನ ಅರ್ಥಾತ್ ತನ್ನ ತಲೆಯ ಮೇಲಿರುವ ಪರಮಾತ್ಮನ ದಯಾ-ಹಸ್ತವನ್ನು ದೂರತಳ್ಳುವಿಕೆ.

ಆಗಾಗ್ಗೆ ಪರಮೇಶ್ವರನು ಉತ್ತಮ ಕಾರ್ಯ ಮಾಡಲೂ ಸಹ ಹೃದಯದಲ್ಲಿ ಪ್ರೇರಣೆಮಾಡುತ್ತಾನೆ. ಭಜನೆ-ಧ್ಯಾನ, ಸೇವೆ-ಸತ್ಸಂಗ ಮುಂತಾದುವನ್ನು ಮಾಡಲು ಸ್ಫೂರ್ತಿಯುಂಟಾಗುತ್ತದೆ. ಆದರೆ ಈ ಜೀವನು ಅದನ್ನು ಅವಹೇಳನ ಮಾಡಿ ಪ್ರಾಪಂಚಿಕ ವಿಷಯ-ಭೋಗ ಮತ್ತು ಪ್ರಮಾದದಲ್ಲಿ ತೊಡಗುತ್ತಾನೆ. ಇದೂ ಸಹ ನಮ್ಮ ತಲೆಯ ಮೇಲಿರುವ ಆ ದಯಾಮಯಿಯ ಹಸ್ತವನ್ನು ದೂರ ಮಾಡಿದ ಹಾಗೆ.

ಇದಲ್ಲದೆ ಪ್ರಾಪಂಚಿಕ ಐಶ್ವರ್ಯ ಅರ್ಥಾತ್ ಹೆಂಡತಿ, ಮಗ ಮತ್ತು ಹಣ ಒದಗಿ ಬರುತ್ತವೆ. ಅದನ್ನು ನಾವು ಸುಖ ಮತ್ತು ಸಂಪತ್ತು ಎಂಬುದಾಗಿ ಹೇಳುತ್ತೇವೆ. ಅವುಗಳಲ್ಲಿಯೂ ಸಹ ಆಗಾಗ್ಗೆ ಕ್ಷಯ ಮತ್ತು ನಾಶದ ಭಾವನೆ ಉತ್ಪತ್ತಿಯಾಗುತ್ತದೆ ಮತ್ತು ಅದೂ ಸಹ ಸ್ವಾಭಾವಿಕವಾಗಿಯೇ ನಮಗೆ ಕ್ಷಣಭಂಗುರ ಮತ್ತು ನಾಶವಾಗುವಂತಹುದು ಎಂದು ಗೊತ್ತಾಗುತ್ತದೆ. ಈ ರೀತಿ ಕಂಡುಬಂದರೂ ಸಹ ನಾವು ಅದರ ತ್ಯಾಗ ಅಥವಾ ಸದುಪಯೋಗ ಮಾಡುವುದಿಲ್ಲ. ಇದೂ ಆ ದಯಾಮಯೀ ಈಶ್ವರನ ಹಸ್ತವನ್ನು ನಮ್ಮ ತಲೆಯ ಮೇಲಿನಿಂದ ದೂರ ಸರಿಸಿದಂತೆಯೇ ಆಗಿರುತ್ತದೆ.

ಈಶ್ವರನ ಸಾಕ್ಷಾತ್ಕಾರ ಪ್ರಾಪ್ತಿಯ ಸಾಧನೆಯಲ್ಲಿ ಅಡ್ಡಿಯಂತಿರುವ ಪ್ರಾಪಂಚಿಕ ಧನ-ಜನ-ಮಾನ-ಐಶ್ವರ್ಯ ಮುಂತಾದವುಗಳು ನಾಶವಾದರೆ ಪುನಃ ಆ ಕ್ಷಣಭಂಗುರವಾದ, ನಾಶಯುತವಾದ, ದುಃಖದಾಯಿ ಪದಾರ್ಥಗಳನ್ನು ಪಡೆಯಲು ಇಚ್ಛಿಸುವುದು; ಇದೂ ಸಹ ಆ ದಯಾಮಯಿಯ ಹಸ್ತವನ್ನು ತನ್ನ ಮೇಲಿನಿಂದ ದೂರಮಾಡುವುದೇ ಆಗಿದೆ.

ಭಗವಂತನ ನಾಮ, ರೂಪ, ಗುಣ ಮತ್ತು ಪ್ರಭಾವಗಳ ಸ್ಫೂರ್ತಿ ಸ್ವತಃ ಉಂಟಾದಾಗ, ಇದೂ ಆತನ ಅತ್ಯಂತ ವಿಶೇಷವಾದ ದಯೆ. ಇಷ್ಟಿದ್ದರೂ ಸಹ ನಾವು ಆತನನ್ನು ಮರೆತುಬಿಡುತ್ತೇವೆ ಮತ್ತು ಜ್ಞಾಪಕದಲ್ಲಿಟ್ಟುಕೊಳ್ಳಲು ಉಚಿತ ಪ್ರಯತ್ನ ಮಾಡುವುದಿಲ್ಲ. ಇದೇ ಆ ದಯಾಮಯನ ದಯೆಯ ಹಸ್ತವನ್ನು ನಮ್ಮ ತಲೆಯ ಮೇಲಿನಿಂದ ದೂರಮಾಡುವುದು.

ಆದುದರಿಂದ ನಾವು ಭಗವಂತನ ದಯೆಯನ್ನು ಗುರುತಿಸಿಕೊಳ್ಳಬೇಕು ಮತ್ತು ಯಾವಾಗಲೂ ಆತನ ಸಂರಕ್ಷಣೆಯಲ್ಲಿ ಇದ್ದುಕೊಂಡು ನಿತ್ಯವೂ ನಿರ್ಭಯನೂ ಮತ್ತು ಪರಮ ಸುಖಿಯೂ ಆಗಬೇಕು.

# ಭಗವತ್ಕೃಪೆ

**(ಹೆಜ್ಜೆ-ಹೆಜ್ಜೆಗೂ ದರ್ಶನ ಮಾಡುವ ಪ್ರಕಾರ)**

ಭಗವತ್ಕೃಪೆಯು ಉದ್ದೇಶಪೂರ್ವಕವಾಗಿರುತ್ತದೆಯೋ ಅಥವಾ ಉದ್ದೇಶ ರಹಿತವಾಗಿರುತ್ತದೆಯೋ? ಮನುಷ್ಯ ಎಲ್ಲಾ ಪರಿಸ್ಥಿತಿಗಳಲ್ಲಿಯೂ ಭಗ ವಂತನ ದಯೆಯ ದರ್ಶನವನ್ನು ಯಾವ ಪ್ರಕಾರ ಮಾಡಬೇಕು? ಎಂದು ಒಬ್ಬರ ಪ್ರಶ್ನೆ.

ಇದಕ್ಕೆ ಉತ್ತರವಾಗಿ ಈ ರೀತಿ ನನ್ನ ನಿವೇದನೆ-ಭಗವತ್ಕೃಪೆಯ ಮಹತ್ತ್ವವನ್ನು ಮಾತಿನ ಮೂಲಕ ಪೂರ್ಣರೂಪದಿಂದ ವರ್ಣಿಸುವುದು ಅಸಂಭವ. ಏಕೆಂದರೆ ಭಗವಂತನ ದಯೆಯ ಮಹತ್ವ ಅಪಾರವಾದದ್ದು ಮತ್ತು ಮಾತಿನಲ್ಲಿ ಏನೆಲ್ಲಾ ಹೇಳಲಾಗುವುದೋ ಅದು ಸ್ವಲ್ಪ ಮಾತ್ರ. ಭಗವಂತನ ಕೃಪೆಯ ರಹಸ್ಯವನ್ನು ಯಾವ ಮಹಾಪುರುಷರು ಯತ್ಕಿಂಚಿತ್ ತಿಳಿದುಕೊಂಡಿರುತ್ತಾರೆಯೋ ಅವರೂ ಸಹ ತಾವು ತಿಳಿದಿರುವಷ್ಟನ್ನು ಮಾತಿನ ಮೂಲಕ ತಿಳಿಸಲಾರರು. ಭಗವಂತನ ಕೃಪೆಯು ಎಲ್ಲಾ ಜೀವರುಗಳ ಮೇಲೆ ಸದಾ-ಎಂದೆಂದಿಗೂ ಅಪಾರವಾಗಿದೆ. ಈ ವಿಷಯದಲ್ಲಿ ಜನರಿಗೆ ಎಷ್ಟು ಕಲ್ಪನೆಯುಂಟೋ ಅದಕ್ಕಿಂತಲೂ ಸಹ ಭಗವಂತನ ಕೃಪೆ ಬಹಳ ಅಧಿಕವಾಗಿದೆ. ವಿಚಾರ ಒಂದೇ ಆದಕಾರಣ ಸ್ವಲ್ಪ ಪುನರುಕ್ತಿಗಳು ಉಂಟಾಗಬಲ್ಲವು, ಆದಾಗ್ಯೂ ಮೂರು ಲೇಖನಗಳನ್ನೂ ಸೇರಿಸಿಕೊಂಡು ಓದುವುದರಿಂದ ಭಗವಂತನ ದಯೆಯ ಮಹತ್ವವನ್ನು ತಿಳಿದುಕೊಳ್ಳಲು ಹೆಚ್ಚು ಸಹಾಯವಾಗಬಲ್ಲದು.

ನಿಜವಾಗಿಯೂ ಭಗವಂತನ ದಯೆ ಎಲ್ಲಾ ಪ್ರಾಣಿಗಳ ಮೇಲೆಯೂ ಯಾವ ಕಾರಣವೂ ಇಲ್ಲದೆ ಸಮಭಾವದಿಂದ ಯಾವಾಗಲೂ ಸ್ವಾಭಾವಿಕ ವಾಗಿ ಇರುತ್ತದೆ. ಆದುದರಿಂದ ಅದನ್ನು ನಿಷ್ಕಾರಣವೆಂದೇ ಹೇಳಬೇಕು.

ಆದರೆ ಯಾರು ಭಗವಂತನ ದಯೆಯಲ್ಲಿ ಎಷ್ಟು ಹೆಚ್ಚು ನಂಬಿಕೆ ಇಟ್ಟುಕೊಳ್ಳುತ್ತಾನೆಯೋ, ತನ್ನ ಮೇಲೆ ಎಷ್ಟು ಅಧಿಕವಾದ ದಯೆಯಿದೆ ಎಂದು ಭಾವಿಸುತ್ತಾನೆಯೋ, ಅವನು ಆತನ ದಯೆಯ ತತ್ತ್ವವನ್ನು ಅಷ್ಟೇ ಹೆಚ್ಚು-ಹೆಚ್ಚಾಗಿ ತಿಳಿದುಕೊಳ್ಳುತ್ತಾನೆ ಹಾಗೂ ಅವನಿಗೆ ಅಷ್ಟೇ ಹೆಚ್ಚಿನ ಪ್ರತ್ಯಕ್ಷ ಲಾಭ ದೊರೆಯುತ್ತದೆ. ಆದುದರಿಂದ ಅದನ್ನು ಸಕಾರಣವೆಂದೂ ಸಹ ಹೇಳಬಹುದು. ಆದರೆ ಇದರಲ್ಲಿ ಭಗವಂತನಿಗೆ ತನ್ನ ಯಾವ ಕಾರಣವೂ ಇರುವುದಿಲ್ಲ.

ಭಗವಂತನಾದರೋ ಸಂಪೂರ್ಣವಾಗಿ ಪೂರ್ಣಕಾಮ, ಸರ್ವಶಕ್ತ ಮಹಾನ್ ಈಶ್ವರ, ಆತನ ದಯೆಯಲ್ಲಿ ಯಾವುದೇ ಪ್ರಕಾರದ ಸ್ವಾರ್ಥ ರೂಪೀ ಉದ್ದೇಶ್ಯಕ್ಕೆ ಸ್ಥಾನ ದೊರೆಯಬಲ್ಲಂತಹ ಯಾವ ರೀತಿಯ ಆಶೆ ಅಥವಾ ಇಚ್ಛೆಯ ಕಲ್ಪನೆಯಾದರೂ ಆತನಲ್ಲಿ ಹೇಗಿರಬಲ್ಲದು. ಆತ ನಾದರೋ ಸ್ವಭಾವದಿಂದಲೇ ಕಾರಣರಹಿತ ಪರಮ ದಯಾಳು. ಎಲ್ಲರ ಸುಹೃದಯಿಯಾಗಿದ್ದಾನೆ. ಆತನ ಕ್ರಿಯೆಗಳೆಲ್ಲಾ ಎಲ್ಲಾ ಜೀವರುಗಳ ಹಿತ ಕ್ಕಾಗಿಯೇ ನಡೆಯುತ್ತವೆ. ವಾಸ್ತವವಾಗಿ ಕರ್ತವ್ಯವಿಲ್ಲದಿದ್ದರೂ ಸಹ ಆತನು ದಯಾಪರನಾಗಿ ಜೀವರ ಹಿತಕ್ಕಾಗಿ ಪ್ರಯತ್ನಿಸುತ್ತಾನೆ. ಜನ್ಮರಹಿತನಾದಾಗ್ಯೂ ಸಹ ಸಾಧು-ಸತ್ಪುರುಷರ ಉದ್ಧಾರ, ಧರ್ಮದ ಪ್ರಚಾರ ಮತ್ತು ದುಷ್ಟರ ಸಂಹಾರ * ಮಾಡುವುದಕ್ಕಾಗಿ ಮತ್ತು ಪ್ರಪಂಚದಲ್ಲಿ ತನ್ನ ಪವಿತ್ರ ಲೀಲೆಗಳನ್ನು ವಿಸ್ತಾರಮಾಡಿ ಜನರಲ್ಲಿ ಪ್ರೀತಿ ಮತ್ತು ಶ್ರದ್ಧೆಯು ಸಂಚರಿಸುವಂತೆ ಮಾಡಲು ಆಗಾಗ್ಗೆ ಅವತಾರ ತಾಳುತ್ತಾನೆ. ನಿರ್ಗುಣ, ನಿರಾಕಾರ ಮತ್ತು ನಿರ್ವಿಕಾರ ನಾಗಿದ್ದರೂ ಸಹ ತನ್ನ ಭಕ್ತರ ಪ್ರೇಮಕ್ಕೆ ಅಧೀನನಾಗಿ ಸಗುಣ ಮತ್ತು ಸಾಕಾರ ರೂಪದಿಂದ ದರ್ಶನ ಕೊಡಲು ಬಾಧ್ಯನಾಗುತ್ತಾನೆ. ಸರ್ವೇಶ್ವರ, ಸರ್ವಶಕ್ತ

* ಇಲ್ಲಿ ಸಂಹಾರರೂಪದಿಂದಲೂ ಸಹ ಭಗವಂತನು ಒಳ್ಳೆಯದನ್ನೇ ಮಾಡುತ್ತಾನೆ. ಹೇಳಿದ್ದಾನೆ-

ಲಾಲನೇ ತಾಡನೇ ಮಾತುರ್ನಾಕಾರುಣ್ಯಂ ಯಥಾರ್ಭಕೇ।
ತದ್ವದೇವ ಮಹೇಶಸ್ಯ ನಿಯಂತುರ್ಗುಣದೋಷಯೋಃ॥

'ಮಕ್ಕಳನ್ನು ಪ್ರೀತಿಸುವುದು ಮತ್ತು ಹೊಡೆಯುವುದು, ಎರಡರಲ್ಲೂ ತಾಯಿಯ ದಯೆಯೇ ಇದೆ. ಅದೇರೀತಿ ಜೀವರುಗಳ ಗುಣ-ದೋಷಗಳನ್ನು ನಿಯಂತ್ರಿಸುವ ಭಗವಂತನ ಕೃಪೆಯು ಎಲ್ಲಾ ರೀತಿಯಿಂದಲೂ ಅವನ ಮೇಲೆ ಇದ್ದೇ ಇದೆ.'

ಮತ್ತು ಸಂಪೂರ್ಣ ಸ್ವತಂತ್ರನಾಗಿದ್ದರೂ ಸಹ ಪ್ರೇಮದಿಂದ ದ್ರವಿತನಾಗಿ ಭಕ್ತರ ಅಧೀನನಾಗಿ ಬಿಡುವನು. ಇವೆಲ್ಲಕ್ಕೂ ಆತನ ಉದ್ದೇಶರಹಿತ ಪರಮ ದಯೆಯೇ ಕಾರಣವಾಗಿದೆ.

ಭಗವಂತನ ಸಾಕ್ಷಾತ್ಕಾರವನ್ನು ಪಡೆದ ಭಗವದ್ಭಕ್ತರು, ಆತನ ದಯೆಯ ಮಹತ್ತ್ವವನ್ನು ತಿಳಿದುಕೊಂಡಿರುವವರು, ಆ ದಯಾಮಯಿ ಪರಮೇಶ್ವರನ ದಯೆಯ ಅಂಶವು ತಮ್ಮಲ್ಲಿ ವ್ಯಾಪಿಸಿಕೊಂಡಿರುವವರು-ಈ ಎಲ್ಲಾ ಮಹಾಪುರುಷರಿಗೂ ಸಹ ಅನ್ಯ ಜೀವರುಗಳೊಡನೆ ಯಾವ ರೀತಿಯ ಸ್ವಾರ್ಥದ ಸಂಬಂಧ ಇರುವುದಿಲ್ಲ. ಅವರ ಸಮಸ್ತ ಕ್ರಿಯೆಗಳೆಲ್ಲಾ ಕೇವಲ ಲೋಕಹಿತಕ್ಕಾಗಿಯೇ ಯಾವ ಸ್ವಾರ್ಥರೂಪೀ ಉದ್ದೇಶವೂ ಇಲ್ಲದೆ ನಡೆಯುತ್ತವೆ. ಆಗ ಭಗವಂತನ ದಯೆ ಉದ್ದೇಶ ರಹಿತವಾಗುವುದು, ಇದರಲ್ಲಿ ಹೇಳುವಂತಹುದೇನಿದೆ? ಮಹಾಪುರುಷರಿಗೆ ಯಾವ ಜೀವಿಯೊಡನೆಯೂ ಸಹ ಯಾವ ಪ್ರಕಾರದ ಸ್ವಾರ್ಥದ ಸಂಬಂಧ ಇರುವುದಿಲ್ಲ. ಈ ವಿಚಾರದಲ್ಲಿ ಭಗವಂತನು ಸ್ವತಃ ಹೇಳುತ್ತಾನೆ-

*ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ।*
*ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ॥*

(ಗೀತಾ ೩/೧೮)

'ಆ ಮಹಾಪುರುಷರಿಗೆ ಈ ವಿಶ್ವದಲ್ಲಿ ಕರ್ಮಮಾಡುವುದರಿಂದ ಯಾವ ಪ್ರಯೋಜನವೂ ಇರುವುದಿಲ್ಲ ಮತ್ತು ಕರ್ಮಗಳನ್ನು ಮಾಡದೇ ಇರುವುದರಿಂದಲೂ ಸಹ ಯಾವ ಪ್ರಯೋಜನವೂ ಇರುವುದಿಲ್ಲ ಹಾಗೂ ಎಲ್ಲಾ ಪ್ರಾಣಿಗಳೊಡನೆ ಇವನಿಗೆ ಕಿಂಚಿತ್ತೂ ಸಹ ಸ್ವಾರ್ಥದ ಸಂಬಂಧ ವಿರುವುದಿಲ್ಲ. ಆದಾಗ್ಯೂ ಸಹ ಅವನ ಮೂಲಕ ಕೇವಲ ಲೋಕದ ಹಿತಾರ್ಥವಾಗಿ ಕರ್ಮಗಳು ಮಾಡಲ್ಪಡುತ್ತವೆ.

ಇದೇ ರೀತಿ ತನ್ನ ವಿಷಯದಲ್ಲಿಯೂ ಭಗವಂತ ಹೇಳುತ್ತಾನೆ-

*ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಞ್ಚನ।*
*ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ॥*(ಗೀತಾ ೩/೨೨)

'ಎಲೈ ಅರ್ಜುನ! ನನಗೆ ಈ ಮೂರು ಲೋಕಗಳಲ್ಲಿಯೂ

ಕರ್ತವ್ಯವೇನೂ ಇಲ್ಲ ಮತ್ತು ಪಡೆದುಕೊಳ್ಳಲು ಯೋಗ್ಯ ವಸ್ತು ಯಾವುದೂ ದೊರೆಯದೆಯೂ ಇಲ್ಲ, ಆದಾಗ್ಯೂ ಸಹ ನಾನು ಕರ್ಮದಲ್ಲಿಯೇ ವರ್ತಿಸುತ್ತೇನೆ'.

ತುಲಸೀದಾಸರೂ ಸಹ ಹೇಳಿದ್ದಾರೆ -

***ಹೇತು ರಹಿತ ಜಗ ಜುಗ ಉಪಕಾರೀ।***
***ತುಮ್ಹ ತುಮ್ಹಾರ ಸೇವಕ ಅಸುರಾರೀ॥***
***ಸ್ವಾರಥ ಮೀತ ಸಕಲ ಜಗ ಮಾಹೀ।***
***ಸಪನೇಹು ಪ್ರಭು ಪರಮಾರಥ ನಾಹೀ॥***

ಮಹಾಪುರುಷರಿಗೆ ಮತ್ತು ಭಗವಂತನಿಗೆ ಯಾವ ಕರ್ತವ್ಯವಾಗಲೀ ಮತ್ತು ಪ್ರಯೋಜನವಾಗಲೀ ಇಲ್ಲದಿದ್ದರೂ ಸಹ ಜನರನ್ನು ದುರ್ಮಾರ್ಗ ದಿಂದ ರಕ್ಷಿಸಲು ಮತ್ತು ಈಶ್ವರಭಕ್ತಿರೂಪೀ ಸನ್ಮಾರ್ಗದಲ್ಲಿ ತೊಡಗಿಸಲು ಕೇವಲ ಲೋಕ-ಹಿತಾರ್ಥವಾಗಿ ಅವರ ಮೂಲಕ ಎಲ್ಲಾ ಕ್ರಿಯೆಗಳೂ ನಡೆಯುತ್ತಿರುತ್ತವೆ. ಇದಕ್ಕೆ ಆತನ ಅಪಾರ ದಯೆಯೇ ಕಾರಣ ಎಂದು ಮೇಲಿನ ಈ ವರ್ಣನೆಯಿಂದ ತಿಳಿದುಬರುತ್ತದೆ.

ಭಗವಂತನು ಪರಮ ದಯಾಳು ಮತ್ತು ಸರ್ವಶಕ್ತನಾದಾಗ್ಯೂ ಸಹ ಸಮದರ್ಶಿ ಮತ್ತು ನಿಃಸ್ಪೃಹನಾದ್ದರಿಂದ ಆತನಿಂದ ತನ್ನಷ್ಟಕ್ಕೆ ತಾನೇ ಯಾವ ಕ್ರಿಯೆಯೂ ನಡೆಯುವುದಿಲ್ಲ. ಶ್ರದ್ಧಾ-ಭಕ್ತಿ-ಪ್ರೇಮಪೂರ್ವಕ ಶರಣಾಗತ ನಾಗುವುದರಿಂದ ಭಕ್ತನ ಹಿತಕ್ಕಾಗಿಯೇ, ಆತನಲ್ಲಿ ಕ್ರಿಯೆಗಳ ಉದ್ಭವ ವಾಗುತ್ತದೆ ಮತ್ತು ಆತನ ದಯೆಯ ವಿಕಾಸವಾಗುತ್ತದೆ.

ಈ ಪ್ರಕಾರ ಎಲ್ಲಾ ಜೀವಿಗಳ ಮೇಲೆ ಭಗವಂತನ ಅಪಾರ ದಯೆಯು ಸಮಾನ ಭಾವದಿಂದ ಇರುವಾಗ ಎಲ್ಲಾ ಜೀವರುಗಳಿಗೂ ಶ್ರೇಯಸ್ಸು ಏಕೆ ಆಗಬಾರದು? ಎಂಬ ಪ್ರಶ್ನೆ ಏಳುತ್ತದೆ. ವಿವೇಚನೆ ಮಾಡಿದರೆ ಇದಕ್ಕೆ ಉತ್ತರ ಹೀಗೆ ದೊರೆಯುತ್ತದೆ-ಆತನ ದಯೆಯ ತತ್ತ್ವವನ್ನು ತಿಳಿಯದ ಕಾರಣ ಜನರು ಆ ದಯೆಯಿಂದ ವಿಶೇಷ ಲಾಭ ಪಡೆದುಕೊಳ್ಳಲಾರರು. ಜಗದೋದ್ಧಾರಿಣಿ ಭಾಗೀರಥಿ ಗಂಗಾ ಪ್ರವಾಹವು ಲೋಕಹಿತಾರ್ಥವಾಗಿ ನಿರಂತರ ಹರಿಯು ತ್ತಿರುತ್ತದೆ. ಆದಾಗ್ಯೂ ಗಂಗೆಯ ಪ್ರಭಾವವನ್ನು ತಿಳಿಯದವರು, ಶ್ರದ್ಧಾ-ಭಕ್ತಿ

ಗಳ ಕೊರತೆಯಿಂದ ಸ್ನಾನ-ಪಾನಾದಿ ಮಾಡದೇ ಇರುವವರು ಅದರಿಂದ ವಿಶೇಷ ಲಾಭ ಪಡೆಯಲಾರರು; ಅದರಂತೆಯೇ ಭಗವಂತನ ದಯೆಯ ಪ್ರವಾಹವು ಹಗಲು-ರಾತ್ರಿ ಗಂಗಾ ಪ್ರವಾಹಕ್ಕಿಂತ ಹೆಚ್ಚಾಗಿ ಎಲ್ಲೆಲ್ಲಿಯೂ ಹರಿಯುತ್ತಿದೆ. ಆದರೂ ಸಹ ಮನುಷ್ಯನು ಅದರ ಪ್ರಭಾವವನ್ನು ಅರಿಯದ ಕಾರಣ ಮತ್ತು ಶ್ರದ್ಧಾ-ಭಕ್ತಿಗಳ ಕೊರತೆಯ ಕಾರಣ ಭಗವಂತನಿಗೆ ಶರಣಾಗಿ ಆತನ ದಯೆಯ ವಿಶೇಷ ಪ್ರಯೋಜನ ಪಡೆಯಲಾರ.

ಸಮಾನಭಾವದಿಂದ ಭಗವಂತನ ದಯೆಯ ಸಾಧಾರಣ ಲಾಭವು ಎಲ್ಲಾ ಜೀವಿಗಳಿಗೂ ದೊರೆಯುತ್ತದೆ. ಆದರೆ ಆತನ ದಯೆಗೆ ಪಾತ್ರನಾದವನು ಅದರಿಂದ ವಿಶೇಷ ಲಾಭ ಪಡೆಯಬಲ್ಲ. ಸೂರ್ಯನ ಬಿಸಿಲು ಮತ್ತು ಪ್ರಕಾಶ ಎಲ್ಲೆಲ್ಲಿಯೂ ಸಮಾನ ಭಾವದಿಂದ ಎಲ್ಲರಿಗೂ ದೊರೆಯತ್ತದೆ. ಆದುದರಿಂದ ಅದರ ಲಾಭ ಸಮಾನವಾಗಿ ಎಲ್ಲರಿಗೂ ದೊರೆಯುತ್ತದೆ. ಆದರೆ ಸೂರ್ಯಮುಖಿ ಗಾಜಿನಮೇಲೆ ಅದರ ಶಕ್ತಿಯ ವಿಶೇಷತೆ ಉತ್ಪತ್ತಿಯಾಗುತ್ತದೆ. ಅದರಲ್ಲಿ ತಕ್ಷಣ ಬೆಂಕಿ ಪ್ರಕಟವಾಗುತ್ತದೆ. ಸೂರ್ಯಮುಖಿ ಗಾಜಿನಂತೆ ಯಾರ ಅಂತಃಕರಣ ಶುದ್ಧವಾಗಿದೆಯೋ, ಯಾರ ಅಂತಃಕರಣದಲ್ಲಿ ಭಗವಂತನ ಬಗ್ಗೆ ವಿಶೇಷ ಶ್ರದ್ಧೆ ಮತ್ತು ಪ್ರೇಮವುಂಟೋ, ಅವನು ಆತನ ದಯೆಯಿಂದ ವಿಶೇಷ ಲಾಭ ಪಡೆಯಬಲ್ಲನು.

ಮನುಷ್ಯನ ಸಂಚಿತ, ಪ್ರಾರಬ್ಧ ಮತ್ತು ಕ್ರಿಯಮಾಣ (ಅರ್ಥಾತ್ ಮುಂದೆ ಫಲ ದೊರೆಯುವುದೆಂದು ಈಗ ಮಾಡುವ ಶುಭಕಾರ್ಯ) ಈ ಮೂರು ಪ್ರಕಾರಗಳ ಕರ್ಮಗಳೊಡನೆ ಭಗವಂತನ ದಯೆಯ ಸಂಬಂಧವಿದೆ-ಹಿಂದೆ ಮಾಡಿದ್ದ ಪುಣ್ಯಕರ್ಮಗಳ ಸಂಚಯವು ಭಗವಂತನ ದಯೆಯಿಂದ ಆಗಿದೆ ಹಾಗೂ ಆ ಸಂಚಿತ ಕರ್ಮಗಳ ಅನುಸಾರ ಪ್ರಾರಬ್ಧವನ್ನು ಅನುಭವಿಸುವ ವಿಧಾನವನ್ನು ಭಗವಂತನು ದಯಾಪೂರ್ವಕವಾಗಿ ಜೀವಿಗಳ ಹಿತಕ್ಕೋಸ್ಕರ ಮಾಡುತ್ತಾನೆ. ಆದುದರಿಂದ ಭಗವಂತನ ದಯೆಯ ರಹಸ್ಯವನ್ನು ತಿಳಿದವನು ಪ್ರಾರಬ್ಧವನ್ನು ಅನುಭವಿಸುವ ಸಮಯದ ಪ್ರತಿಯೊಂದು ಸ್ಥಿತಿಯಲ್ಲಿಯೂ ಭಗವಂತನ ದಯೆಯ ದರ್ಶನ ಮಾಡುತ್ತಾನೆ. ಕ್ರಿಯಮಾಣ ಅರ್ಥಾತ್ ಇಂದಿನ ಜನ್ಮದಲ್ಲಿ ಮಾಡುವ ಶುಭ

ಕರ್ಮವೂ ಸಹ ಭಗವಂತನ ದಯೆಯಿಂದಲೆ ನಡೆಯುತ್ತವೆ, ಆತನ ದಯೆಯಿಂದಲೇ ಮನುಷ್ಯ ಸನ್ಮಾರ್ಗದಲ್ಲಿ ತೊಡಗುತ್ತಾನೆ. ಆದ್ದರಿಂದ ಎಲ್ಲಾ ಕರ್ಮಗಳೊಡನೆಯೂ ಭಗವಂತನ ದಯೆಯ ಸಂಬಂಧ ಸದಾ ಇರುತ್ತದೆ.

ಶ್ರದ್ಧಾ-ಭಕ್ತಿ ಪೂರ್ವಕ ಯೋಚಿಸುವುದರಿಂದ ಕ್ಷಣ-ಕ್ಷಣದಲ್ಲಿಯೂ, ಹೆಜ್ಜೆ-ಹೆಜ್ಜೆಗೂ ಪ್ರತಿಯೊಂದು ಸ್ಥಿತಿಯಲ್ಲಿಯೂ ಮನುಷ್ಯನಿಗೆ ಭಗವಂತನ ದಯೆಯ ದರ್ಶನ ಆಗುತ್ತಾ ಇರುತ್ತದೆ! ಜೀವಿಗಳಿಗೆಲ್ಲಾ ನೀರು, ಗಾಳಿ, ಬೆಳಕು ಮುಂತಾದ ತತ್ತ್ವಗಳಿಂದ ಸುಖದ ಅನುಭವ ದೊರೆಯುತ್ತಾ ಇದೆ. ಅವರ ಜೀವನ ನಡೆಯುತ್ತಿದೆ. ತಿಂಡಿ-ತೀರ್ಥ ಇತ್ಯಾದಿಗಳು ಜರುಗುತ್ತಿವೆ. ಇವುಗಳಲ್ಲೆಲ್ಲಾ ಈಶ್ವರನ ಸಮಾನವಾದ ದಯೆ ವ್ಯಾಪಿಸಿದೆ.

ಮನುಷ್ಯನು ಶುಭ ಮತ್ತು ಅಶುಭ ಕರ್ಮಗಳಿಗೆ ಅನುಸಾರವಾಗಿ ಫಲವನ್ನು ಅನುಭವಿಸುವ ವ್ಯವಸ್ಥೆಯನ್ನು ಮಾಡುವುದರಲ್ಲಿ ಭಗವಂತನ ದಯೆಯ ಕೈವಾಡವಿದೆ.

ಸ್ವಲ್ಪ-ಮಾತ್ರ ಜಪ, ಧ್ಯಾನ ಮತ್ತು ಸತ್ಸಂಗ ಮಾಡುವುದರಿಂದ ಮನುಷ್ಯನ ಜನ್ಮ-ಜನ್ಮಾಂತರದ ಪಾಪಗಳೆಲ್ಲಾ ನಾಶವಾಗುವಂತಹ ನಿಯಮ ವನ್ನು ಭಗವಂತ ಮಾಡಿದ್ದಾನೆ. ಇದರಲ್ಲಿ ಭಗವಂತನ ಅಪಾರ ದಯೆ ತುಂಬಿರುತ್ತದೆ.

ಭಗವಂತನಿಗೆ ಶರಣಾಗಿ ಪ್ರೇಮ ಮತ್ತು ಕರುಣೆಯ ಭಾವದಿಂದ ಪ್ರಾರ್ಥಿಸಿದರೆ ಪ್ರತ್ಯಕ್ಷವಾಗಿ ಪ್ರಕಟವಾಗುವುದು, ಭಕ್ತನ ಪ್ರತಿಯೊಂದು ರೀತಿಯ ದುಃಖಗಳನ್ನು ಮತ್ತು ಸಂಕಟಗಳನ್ನು ಹೋಗಲಾಡಿಸುವುದು, ಶರಣಾದವರನ್ನು ಎಲ್ಲಾ ಪ್ರಕಾರದಿಂದಲೂ ರಕ್ಷಿಸುವುದು, ಪ್ರತಿಯೊಂದು ಪಾಪಕರ್ಮಗಳಿಂದಲೂ ಅವನನ್ನು ಪಾರು ಮಾಡುವುದು, ಇದು ಆತನ ವಿಶೇಷ ದಯೆಯ ಪ್ರದರ್ಶನ. ಇಚ್ಛಿಸದಿದ್ದರೂ ಮತ್ತು ಪ್ರಾರ್ಥಿಸದಿದ್ದರೂ ಸಹ ಭಕ್ತ ಪ್ರಹ್ಲಾದನಂತೆ ದೃಢವಾದ ನಂಬಿಕೆಯಿಟ್ಟುಕೊಂಡು ಭಕ್ತಿಯುಳ್ಳ ಭಕ್ತರ ಹಿತಕ್ಕಾಗಿ ಸ್ವತಃ ಪ್ರಕಟಗೊಂಡು ಅವನಿಗೆ ದರ್ಶನಕೊಡುವುದು .

ಸಂಪೂರ್ಣವಾಗಿ ಸಂಕಟಗಳಿಂದ ಅವನ ರಕ್ಷಣೆ, ಇದು ಭಗವಂತನ ದಯೆಯ ಅತಿಶಯವಾದ ವಿಶೇಷ ಪ್ರದರ್ಶನ.

ಮಹಾತ್ಮರ ಮೂಲಕ ಮತ್ತು ಶಾಸ್ತ್ರಗಳ ಮೂಲಕ ಅಥವಾ ಸ್ವತಃ ಜನರ ಅಂತಃಕರಣದಲ್ಲಿ ಪ್ರೇರಣೆಮಾಡಿ ಅಥವಾ ತಾನೇ ಅವತರಿಸಿ ಜನರನ್ನು ಕೆಟ್ಟಮಾರ್ಗಗಳಿಂದ ದೂರಮಾಡಿ ಒಳ್ಳೆಯ ಮಾರ್ಗದಲ್ಲಿ ತೊಡಗಿಸುವುದು; ಇದೂ ಸಹ ಭಗವಂತನ ವಿಶೇಷ ದಯೆಯ ಪ್ರದರ್ಶನ.

ಹೆಂಡತಿ, ಮಗ, ಹಣ ಮತ್ತು ಮನೆ ಇತ್ಯಾದಿ ಪ್ರಾಪಂಚಿಕ ಪದಾರ್ಥಗಳು ದೊರೆಯುವಿಕೆ ಮತ್ತು ಅವು ಕೈಬಿಟ್ಟು ಹೋಗುವುದರಲ್ಲಿ ಹಾಗೂ ಶರೀರದ ಆರೋಗ್ಯ ಸರಿಯಾಗಿರುವುದರಲ್ಲಿ ಮತ್ತು ಅನಾರೋಗ್ಯ ದಲ್ಲಿ, ರೋಗ ಮತ್ತು ಸಂಕಟಾದಿಗಳು ಬರುವುದರಲ್ಲಿ ಮತ್ತು ಅವು ನಿವಾರಣೆಯಾಗುವುದರಲ್ಲಿ ಹಾಗೂ ಸುಖ-ಸಂಪತ್ತು ಮತ್ತು ದುಃಖವುಂಟಾ ಗುವುದು, ಹೀಗೆ ಪ್ರತಿಯೊಂದು ಅವಸ್ಥೆಯಲ್ಲಿಯೂ ಮನುಷ್ಯನು ಭಗವಂತನ ದಯೆಯ ದರ್ಶನಮಾಡುವ ಅಭ್ಯಾಸ ಮಾಡಿಕೊಳ್ಳಬೇಕು.

ಹೆಂಡತಿ, ಮಕ್ಕಳು, ಹಣ ಮತ್ತು ಮನೆ ಇತ್ಯಾದಿ ಸಾಂಸಾರಿಕ ವಸ್ತುಗಳ ಅಭಿವೃದ್ಧಿಯಲ್ಲಿ ಭಗವಂತನು ಪೂರ್ವಕೃತ ಪುಣ್ಯಕರ್ಮಗಳ ಫಲಸ್ವರೂಪ ವಾಗಿ ಇವೆಲ್ಲವೂ ಇತರರಿಗೆ ಸುಖವನ್ನುಂಟುಮಾಡಲು, ಶ್ರೇಷ್ಠಕರ್ಮಗಳನ್ನು ಮಾಡಲು, ಭಗವಂತನಲ್ಲಿ ಪ್ರೇಮವನ್ನು ಹೆಚ್ಚಿಸಿಕೊಳ್ಳಲು ಮತ್ತು ಪ್ರತಿ ಯೊಂದು ರೀತಿಯಿಂದಲೂ ಈಶ್ವರಭಕ್ತಿಯಲ್ಲಿ ಇವುಗಳನ್ನು ಉಪಯೋಗಿಸು ವುದಕ್ಕಾಗಿಯೇ ಕೊಟ್ಟಿರುತ್ತಾನೆಂದು ತಿಳಿದುಕೊಳ್ಳಬೇಕು. ಹಾಗೆ ತಿಳಿದು ಕೊಂಡು ಆ ಸಾಂಸಾರಿಕ ಪದಾರ್ಥಗಳೊಡನೆ ಕೇವಲ ಶರೀರ ನಿರ್ವಹಣೆಗೆ ಮಾತ್ರವೇ ಯಾರು ತನ್ನ ಸಂಬಂಧ ಇಟ್ಟುಕೊಂಡಿರುತ್ತಾನೆಯೋ ಮತ್ತು ಅವುಗಳನ್ನೆಲ್ಲಾ ಈಶ್ವರನಿಗಾಗಿಯೇ ಯಾರು ವಿನಿಯೋಗಿಸುತ್ತಾನೆಯೋ ಅವನೇ ಈಶ್ವರನ ದಯೆಯ ರಹಸ್ಯವನ್ನು ಸರಿಯಾಗಿ ತಿಳಿದುಕೊಳ್ಳುತ್ತಾನೆ. ಯಾರು ಆ ಪದಾರ್ಥಗಳನ್ನು ಸುಖ-ಭೋಗಗಳಿಗಾಗಿ ಖರ್ಚುಮಾಡುತ್ತಾ ನೆಯೋ, ಅವನು ಭಗವಂತನ ದಯೆಯ ತತ್ತ್ವವನ್ನು ತಿಳಿಯದವನು.

ಈ ಎಲ್ಲಾ ಸಾಂಸಾರಿಕ ಭೋಗವಸ್ತುಗಳೂ ನಾಶವಾದಾಗ ಇವುಗಳಲ್ಲಿ ನನ್ನ ಭೋಗಬುದ್ಧಿ ಮತ್ತು ಆಸಕ್ತಿಯುಂಟಾದ ಕಾರಣ ಇವು ಈಶ್ವರನ ಭಕ್ತಿಯಲ್ಲಿ ಅಡ್ಡಿಯಾಗಿದ್ದವು ಎಂದು ತಿಳಿದುಕೊಳ್ಳಬೇಕು. ಆದುದರಿಂದ ಪರಮ ದಯಾಳು ಭಗವಂತನೇ ದಯೆಯಿಟ್ಟು ತನ್ನ ಕಡೆಗೆ ಆಕರ್ಷಿಸಿ ಕೊಳ್ಳುವುದಕ್ಕಾಗಿ ಇವೆಲ್ಲವನ್ನೂ ದೂರಮಾಡಿದ್ದಾನೆ. ಇದರಲ್ಲಿ ಭಗವಂತನ ಪರಮ ದಯೆ ಇದೆ. ಪತಂಗಗಳು ಅಥವಾ ಬೇರೆ ಪ್ರಕಾರದ ಕೀಟಗಳು ಜ್ವಾಲೆ (ದೀಪ) ಯನ್ನು ನೋಡಿ ಅದರಲ್ಲಿ ಆಸಕ್ತಿ ಹೊಂದುತ್ತವೆ. ಮೋಹಗೊಂಡು ಅದರಲ್ಲಿ ಹಾರಿ-ಹಾರಿ ಬೀಳುತ್ತಾ ಭಸ್ಮವಾಗಿ ಹೋಗುತ್ತವೆ. ಇದು ಪ್ರಪಂಚದಲ್ಲಿ ಕಂಡುಬರುವ ಸಾಮಾನ್ಯ ದೃಶ್ಯ. ಅವುಗಳ ಇಂತಹ ದುಸ್ಥಿತಿಯನ್ನು ಕಂಡು ದಯಾಳುವಾದ ವ್ಯಕ್ತಿ ಆ ಜ್ವಾಲೆಯನ್ನು ಅಲ್ಲಿಂದ ತೆಗೆದುಬಿಡುತ್ತಾನೆ ಅಥವಾ ಆರಿಸಿಬಿಡುತ್ತಾನೆ. ಈ ಕಾರ್ಯದಲ್ಲಿ ಆ ವ್ಯಕ್ತಿಗೆ ಪತಂಗಗಳ ಮೇಲೆ ಮಹತ್ತರವಾದ ದಯೆಯಿದೆ. ಆದಾಗ್ಯೂ ಆ ಪತಂಗಗಳು ಈ ವಿಚಾರವನ್ನು ತಿಳಿಯಲಾರವು. ಅವುಗಳ ಬುದ್ಧಿ-ಮಟ್ಟದಲ್ಲಿ ಆ ದೀಪವನ್ನು ಹೋಗಲಾಡಿಸಿದವನು ಅತ್ಯಂತ ನಿರ್ದಯಿ ಮತ್ತು ಮಹಾಶತ್ರು. ಆದರೆ ಇದು ಅವುಗಳ ಅಜ್ಞಾನ, ಅವುಗಳ ತಪ್ಪು ; ಇದೇ ರೀತಿ ನಮ್ಮ ಮುಗ್ಧ ಸಹೋದರರು ಈಶ್ವರನ ದಯೆಯ ರಹಸ್ಯವನ್ನು ತಿಳಿಯದೆ ಈ ಸಾಂಸಾರಿಕ ಪದಾರ್ಥಗಳೆಲ್ಲಾ ಕೈಬಿಟ್ಟುಹೋಗುವುದನ್ನು ನೋಡಿ ನಾನಾ ರೀತಿಯಿಂದ ಈಶ್ವರನಿಗೆ ದೋಷಾರೋಪಣೆ ಮಾಡುತ್ತಾರೆ. ಆದರೆ ಭಗವಂತ ಪರಮ ದಯಾಳು, ಆದುದರಿಂದ ಆತನು ಅವರ ಅಪರಾಧವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ನನ್ನ ಮೇಲೆ ಅಪಾರ ದಯೆಯಿಟ್ಟು ಭಗವಂತನು ಹಿಂದೆ ಮಾಡಿದ್ದ ಪಾಪಕರ್ಮಗಳಿಂದ ಮುಕ್ತಗೊಳಿಸುವುದಕ್ಕಾಗಿಯೂ, ಮುಂದಿನ ಪಾಪಗಳಿಂದ ಪಾರು ಮಾಡುವುದಕ್ಕಾಗಿಯೂ ಮತ್ತು ಸಮಸ್ತ ಭೋಗ-ಸಾಮಗ್ರಿಗಳನ್ನೂ ಕ್ಷಣಭಂಗುರವಾದುವೆಂದು ಪ್ರತ್ಯಕ್ಷವಾಗಿ ತೋರಿಸಿ ಅವುಗಳಲ್ಲಿ ವೈರಾಗ್ಯವನ್ನು ಉಂಟುಮಾಡುವುದಕ್ಕಾಗಿಯೂ ಅವುಗಳನ್ನು ಹೋಗಲಾಡಿಸಿದ್ದಾನೆ-ಎಂದು ತಿಳಿದುಕೊಂಡು ಯಾರು ಸಾಂಸಾರಿಕ ಭೋಗವಸ್ತುಗಳ ವಿಯೋಗದಲ್ಲಿಯೂ ಸಹ ಭಗವಂತನ ದಯೆಯ

ದರ್ಶನ ಮಾಡುತ್ತಾ ಸದಾ ಪ್ರಸನ್ನನಾಗಿರುತ್ತಾನೆಯೋ, ಅವನೇ ಆತನ ದಯೆಯ ರಹಸ್ಯವನ್ನು ಚೆನ್ನಾಗಿ ತಿಳಿದವನು.

ಹಾಗೆಯೇ, ಶರೀರ ಆರೋಗ್ಯವಾಗಿರುವಾಗ ಭಗವಂತನನ್ನು ಸರ್ವ ವ್ಯಾಪಿಯೆಂದು ತಿಳಿದುಕೊಂಡು ಎಲ್ಲದರಲ್ಲಿಯೂ ಭಗವಂತನ ದರ್ಶನ ಮಾಡುತ್ತಾ, ಇತರರ ಸೇವೆ ಮಾಡುವುದಕ್ಕಾಗಿಯೇ, ಶ್ರೇಷ್ಠ ಪುರುಷರ ಸಂಗಮಾಡಿ ಭಗವಂತನ ಗುಣ, ಪ್ರಭಾವ, ತತ್ತ್ವ ಮತ್ತು ರಹಸ್ಯವನ್ನು ತಿಳಿದುಕೊಳ್ಳುವುದಕ್ಕಾಗಿಯೂ ಮತ್ತು ಆತನ ಭಜನೆ-ಧ್ಯಾನಾದಿಗಳ ನಿರಂತರ ಅಭ್ಯಾಸಕ್ಕಾಗಿಯೂ ಭಗವಂತನು ದಯೆಯಿಟ್ಟು ನನ್ನನ್ನು ನಿರೋಗಿಯಾಗಿ ಇಟ್ಟಿದ್ದಾನೆ-ಎಂದು ತಿಳಿದುಕೊಂಡು ಈ ಕ್ಷಣ ಭಂಗುರವಾದ ಶರೀರವನ್ನು ಯಾರು ಪರಮ ದಯಾಳುವಾದ ಪರಮಾತ್ಮನ ಕೆಲಸದಲ್ಲಿ ಮೇಲೆ ತಿಳಿಸಿದ ಉದ್ದೇಶಗಳ ಅನುಸಾರವಾಗಿ ತೊಡಗಿಸುತ್ತಾನೆಯೋ ಅವನೇ ಆತನ ದಯೆಯ ರಹಸ್ಯವನ್ನು ಸರಿಯಾಗಿ ತಿಳಿದವನು.

ಶರೀರವು ರೋಗಗ್ರಸ್ತವಾಗುವುದರಿಂದ ಈ ಹಿಂದೆ ಮಾಡಿದ ಪಾಪಕರ್ಮಗಳಿಂದ ಮುಕ್ತಗೊಳಿಸುವುದಕ್ಕಾಗಿಯೂ, ಮುಂದೆ ಪಾಪಕರ್ಮಗಳನ್ನು ಮಾಡದಂತೆ ಪಾರುಮಾಡುವುದಕ್ಕಾಗಿಯೂ ಶರೀರದಲ್ಲಿ ವೈರಾಗ್ಯವನ್ನುಂಟು ಮಾಡುವುದಕ್ಕಾಗಿಯೂ, ರೋಗಾದಿಗಳಲ್ಲಿ ತಪೋಬುದ್ಧಿಯುಂಟು ಮಾಡಿ ಅದರ ಲಾಭವನ್ನು ಕೊಡುವುದಕ್ಕಾಗಿಯೂ ಹಾಗೂ ಪದೇ-ಪದೇ ತನ್ನ ಸ್ಮರಣೆಯನ್ನು ಕೊಡಿಸುವುದಕ್ಕಾಗಿಯೂ, ಭಗವಂತನು ಪರಮ ದಯೆಯಿಟ್ಟು ಪುರಸ್ಕಾರ ರೂಪಿಯಾದ ಈ ಸ್ಥಿತಿಯನ್ನು ಕೊಟ್ಟಿದ್ದಾನೆ-ಎಂದು ತಿಳಿದುಕೊಂಡು ಯಾರು ರೋಗಾದಿಗಳು ಬಂದಾಗಲೂ ಸಹ ಯಾವ ರೀತಿಯ ಚಿಂತೆಯನ್ನು ಮಾಡದೆ ಆನಂದದಿಂದ ತನ್ನ ಮನಸ್ಸನ್ನು ನಿರಂತರ ಭಗವಂತನ ಚಿಂತನೆಯಲ್ಲಿ ತೊಡಗಿಸುತ್ತಾನೆಯೋ ಹಾಗೂ ಮೇಲೆ ತಿಳಿಸಿದ ಭಗವಂತನ ಉದ್ದೇಶಗಳನ್ನು ತಿಳಿಯುತ್ತಾ-ತಿಳಿಯುತ್ತಾ ಸದಾ ಹರ್ಷಿತನಾಗಿರುತ್ತಾನೆಯೋ ಅವನೇ ಭಗವಂತನ ದಯೆಯ ರಹಸ್ಯವನ್ನು ಸರಿಯಾಗಿ ತಿಳಿದವನು.

ಇದೇ ರೀತಿ ಸುಖೀ ಮತ್ತು ದುಃಖೀ, ಮಹಾತ್ಮಾ ಮತ್ತು ಪಾಪೀ ಜೀವರುಗಳೊಡನೆ ಸೇರುವ ಮತ್ತು ಬೇರೆಯಾಗುವ ಸಮಯದಲ್ಲಿ ಮತ್ತು ಅವರೊಡನೆ ಯಾವ ಪ್ರಕಾರದಲ್ಲಿಯಾದರೂ ಸಹ ಸಂಬಂಧ ಉಂಟಾದಾಗ ಸದಾ ಭಗವಂತನ ದಯೆಯ ದರ್ಶನ ಮಾಡಬೇಕು.

ಒಳ್ಳೆಯ ವ್ಯಕ್ತಿಗಳೊಡನೆ ಬೆರೆತರೆ ಅವರ ಗುಣ ಮತ್ತು ಆಚರಣೆಗಳನ್ನು ಅನುಕರಣೆ ಮಾಡುವುದಕ್ಕಾಗಿ, ಅವರ ಉಪದೇಶಗಳನ್ನು ಉಪಯೋಗಿಸಿ ಕೊಂಡು ಭಗವಂತನಲ್ಲಿ ಪ್ರೇಮವನ್ನು ವೃದ್ಧಿಪಡಿಸಿಕೊಳ್ಳುವುದಕ್ಕಾಗಿ, ಭಗವಂತನು ಪರಮ ದಯೆಯಿಂದ ಅವರೊಡನೆ ಭೇಟಿಮಾಡಿಸಿದ್ದಾನೆ ಎಂದುಕೊಳ್ಳ ಬೇಕು.

ಅವರೊಡನೆ ವಿಯೋಗವಾದಾಗ ಇಂತಹ ಪುರುಷರ ಸಂಗ ಸದಾ ಇರುವುದು ದುರ್ಲಭ. ಈ ಮಹತ್ತ್ವವನ್ನು ತಿಳಿದುಕೊಳ್ಳಲು, ಪುನಃ ಅವರೊಡನೆ ಸೇರುವ ಪ್ರಬಲ ಇಚ್ಛೆಯನ್ನು ಉಂಟುಮಾಡುವುದಕ್ಕಾಗಿ ಮತ್ತು ಅವರಲ್ಲಿ ಪ್ರೇಮವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಭಗವಂತನು ದಯೆಯಿಂದಲೇ ಅವರ ವಿಯೋಗ ಮಾಡಿಸಿದ್ದಾನೆ.

ದುಷ್ಟರೂ, ದುರಾಚಾರಿಗಳೂ ಆದ ವ್ಯಕ್ತಿಗಳೊಡನೆ ಭೇಟಿಯಾದರೆ, ಅವರಿಂದ ಉಂಟಾಗುವ ಹಾನಿಯನ್ನು ಪ್ರತ್ಯಕ್ಷವಾಗಿ ತೋರಿಸಿ, ದುರ್ಗುಣ ಮತ್ತು ದುರಾಚಾರಗಳಲ್ಲಿ ವಿರಕ್ತಿಯನ್ನು ಹುಟ್ಟಿಸುವುದಕ್ಕಾಗಿ ಭಗವಂತ ಇಂತಹ ಮನುಷ್ಯರೊಡನೆ ಭೇಟಿಮಾಡಿಸುತ್ತಾನೆಂದು ತಿಳಿಯಬೇಕು.

ಅವರ ವಿಯೋಗದಲ್ಲಿ ದುಸ್ಸಹವಾಸದ ದೋಷಗಳಿಂದ ಪಾರುಮಾ ಡಿಸುವದಕ್ಕಾಗಿಯೇ ಭಗವಂತನು ತನ್ನ ದಯೆಯಿಂದ ಇಂತಹ ದುರಾಚಾರಿ ಮನುಷ್ಯರಿಂದ ವಿಯೋಗ ಮಾಡಿಸುತ್ತಾನೆ ಎಂದು ತಿಳಿದುಕೊಳ್ಳಬೇಕು.

ದುಃಖಿಗಳಾದ ಮನುಷ್ಯರೊಡನೆ ಮತ್ತು ಜೀವಿಗಳೊಡನೆ ಭೇಟಿ ಯಾದರೆ ಅಂತಃಕರಣದಲ್ಲಿ ಕರುಣೆಯ ಭಾವವನ್ನು ಹೆಚ್ಚಿಸಿ ಕೊಳ್ಳುವುದಕ್ಕಾಗಿ, ಅವರ ಸೇವೆಗೆ ಅವರಿಂದ ಕಲ್ಪಿಸುವುದಕ್ಕಾಗಿ ಮತ್ತು ಸಂಸಾರದಿಂದ ವೈರಾಗ್ಯ ಉಂಟುಮಾಡುವುದಕ್ಕಾಗಿ ದಯಾಮಯಿ ಭಗವಂತನು ದಯೆತೋರಿಸಿ ಇವರೊಡನೆ ಭೇಟಿಮಾಡಿಸಿದ್ದಾನೆ ಎಂದು ತಿಳಿದುಕೊಳ್ಳಬೇಕು.

ಸುಖವಾಗಿರುವ ಮನುಷ್ಯರೊಡನೆ ಮತ್ತು ಜೀವಿಗಳೊಡನೆ ಭೇಟಿಯಾದರೆ ಇವರೆಲ್ಲರೂ ಸುಖಿಯಾಗಿರುವುದನ್ನು ನೋಡಿ ಸಂತೋಷಪಡುವ ಬುದ್ಧಿ ಕಲಿಸುವುದಕ್ಕಾಗಿ ಭಗವಂತನು ದಯೆಯಿಟ್ಟು ಇವರೊಡನೆ ಭೇಟಿ ಮಾಡಿಸಿದ್ದಾನೆ ಎಂದು ತಿಳಿದುಕೊಳ್ಳಬೇಕು.

ಇವರೆಲ್ಲರ ವಿಯೋಗದಿಂದ ಜನಸಮುದಾಯದ ಆಸಕ್ತಿಯನ್ನು ಹೋಗಲಾಡಿಸಿ ಸಂಸಾರದಲ್ಲಿ ಪರಮ ವೈರಾಗ್ಯವನ್ನುಂಟು ಮಾಡುವುದಕ್ಕಾಗಿ ಮತ್ತು ಏಕಾಂತದಲ್ಲಿದ್ದು ಭಜನೆ-ಧ್ಯಾನಾದಿಗಳ ದೃಢವಾದ ಅಭ್ಯಾಸ ಮಾಡುವುದಕ್ಕಾಗಿ ಭಗವಂತನು ದಯಾಪೂರ್ವಕವಾಗಿ ಇಂತಹ ಅವಕಾಶವನ್ನು ಕೊಟ್ಟಿದ್ದಾನೆ ಎಂದು ತಿಳಿದುಕೊಳ್ಳಬೇಕು.

ಈ ರೀತಿ ಎಲ್ಲಾ ಜೀವಿಗಳ ಮೇಲೆಯೂ ಭಗವಂತನ ಅಪಾರ ದಯೆ ಇರುತ್ತಿದ್ದರೂ ಸಹ ಅದರ ರಹಸ್ಯವನ್ನು ತಿಳಿಯದ ಕಾರಣ ಮನುಷ್ಯ ಅದರ ವಿಶೇಷ ಲಾಭ ಪಡೆದುಕೊಳ್ಳಲಾರ ಮತ್ತು ತನ್ನ ಮೂರ್ಖತನದಿಂದ ಯಾವಾಗಲೂ ದುಃಖಪಡುತ್ತಿರುತ್ತಾನೆ.

ಭಗವಂತನ ದಯೆಯ ಮಹತ್ತ್ವ ಅಪಾರವಾದದ್ದು. ಅದರಿಂದ ಯಾರು ಎಷ್ಟು ಪ್ರಯೋಜನ ಪಡೆಯಲು ಇಚ್ಛಿಸುತ್ತಾನೆಯೋ ಅಷ್ಟನ್ನೂ ಪಡೆದುಕೊಳ್ಳಬಹುದು. ಭಗವಂತನ ದಯೆಯನ್ನು ಮತ್ತು ಅದರ ರಹಸ್ಯವನ್ನು ಹಾಗೂ ತತ್ತ್ವವನ್ನು ತಿಳಿದುಕೊಳ್ಳದೆಯೂ ಸಮಾನಭಾವದಿಂದ ಆ ದಯೆಯು ಸಾಧಾರಣ ಫಲ ಕೊಡುತ್ತದೆ; ಅದನ್ನು ಯಾರು ಎಷ್ಟು ಅಧಿಕವೆಂದು ತಿಳಿದುಕೊಳ್ಳುತ್ತಾರೆಯೋ ಅವರಿಗೆ ಅದು ಅಷ್ಟೇ ಅಧಿಕವಾದ ಫಲ ಕೊಡುತ್ತದೆ ಮತ್ತು ತಿಳಿದುಕೊಂಡು ಅದಕ್ಕೆ ಅನುಸಾರವಾಗಿ ಕೆಲಸಮಾಡುವುದರಿಂದ ಅತ್ಯಧಿಕ ಫಲಕೊಡುತ್ತದೆ.

ಭಗವಂತನ ದಯೆಯ ಪ್ರಭಾವ ಎಷ್ಟರಮಟ್ಟಿಗೆ ಇದೆಯೆಂದರೆ ಅದರ ರಹಸ್ಯ ಮತ್ತು ತತ್ತ್ವಗಳನ್ನು ತಿಳಿದುಕೊಂಡಿರುವವನಿಂದ ಅದು ಸ್ಪರ್ಶ ಮಣಿಯಂತೆ ಸ್ವತಃ ಕೆಲಸ ಮಾಡಿಸಿಕೊಳ್ಳುತ್ತದೆ, ಅರ್ಥಾತ್ ಒಬ್ಬ ದರಿದ್ರನಾದ ಮನುಷ್ಯನ ಮನೆಯಲ್ಲಿ ಸ್ಪರ್ಶಮಣಿ ಬಿದ್ದಿರುತ್ತದೆ, ಆದರೂ ಅವನಿಗೆ ಅದರ ಬಗ್ಗೆ ತಿಳುವಳಿಕೆಯೇ ಇಲ್ಲ, ಅವನು ಅದನ್ನು ಸಾಮಾನ್ಯ

ಕಲ್ಲು ಎಂದೇ ತಿಳಿದುಕೊಳ್ಳುತ್ತಿರುತ್ತಾನೆ. ಪ್ರಯುಕ್ತ ಅವನು ಅದರಿಂದ ವಿಶೇಷ ಪ್ರಯೋಜನ ಪಡೆದುಕೊಳ್ಳಲಾರನು, ಕೇವಲ ಕಲ್ಲಿನಂತೆಯೇ ಅದನ್ನು ಉಪಯೋಗಿಸಿಕೊಳ್ಳುತ್ತಾನೆ. ಆದರೆ ಹಾಗೆ ಮಾಡುತ್ತಾ-ಮಾಡುತ್ತಾ ಅಕಸ್ಮಾತ್ ಆ ಸ್ಪರ್ಶಮಣಿಯ ಸಂಬಂಧ ಕಬ್ಬಿಣದೊಡನೆ ಉಂಟಾದರೆ ಅದು ಅವನಿಗೆ ವಿಶೇಷ ಲಾಭವನ್ನೇ ಕೊಟ್ಟುಬಿಡುತ್ತದೆ. ಅಂತಹ ಅದ್ಭುತ ಚಮತ್ಕಾರವನ್ನು ನೋಡಿ ಅಥವಾ ಬೇರೆ ಯಾರಾದರೂ ತಿಳಿದವರು ಅದರ ನೈಜ ಸ್ಥಿತಿಯನ್ನು ಹೇಳಿದ ಮೇಲೆ, ಅವನು ಆ ಸ್ಪರ್ಶಮಣಿಯನ್ನು ಸರಿಯಾಗಿ ಸ್ಪರ್ಶಮಣಿಯೆಂದೇ ತಿಳಿದುಕೊಳ್ಳುತ್ತಾನೆ. ಆ ಸ್ಪರ್ಶಮಣಿಯ ಗುಣ ಮತ್ತು ಪ್ರಭಾವದ ಜ್ಞಾನ ಅವನಿಗೆ ಚೆನ್ನಾಗಿ ಉಂಟಾಗುತ್ತದೆ. ಆಗ ಅಂತಹ ಜ್ಞಾನ ಆ ಮನುಷ್ಯನಿಂದ ವಿಶೇಷ ಕೆಲಸ ಮಾಡಿಸಿ ಅವನನ್ನು ಪೂರ್ಣ ಫಲಕ್ಕೆ ಭಾಗಿಯನ್ನಾಗಿ ಮಾಡುತ್ತದೆ. ಇದೇ ರೀತಿ ಯಾವುದಾದರೂ ವಿಶೇಷ ಘಟನೆಯಿಂದ ಅಥವಾ ಯಾರಾದರೂ ಮಹಾಪುರುಷರ ಸಂಗದಿಂದ ಭಗವಂತನ ದಯೆಯ ರಹಸ್ಯ, ತತ್ತ್ವ ಮತ್ತು ಪ್ರಭಾವಗಳ ಸ್ವಲ್ಪ ಜ್ಞಾನ ಉಂಟಾದರೂ, ಆ ಜ್ಞಾನವು ಅವನಿಂದ ಸ್ವತಃ ಕೆಲಸ ಮಾಡಿಸಿ ಅವನನ್ನು ಪೂರ್ಣಫಲಕ್ಕೆ ಭಾಗಿಯನ್ನಾಗಿ ಮಾಡಿಬಿಡುತ್ತದೆ.

ಭಗವಂತ ಪರಮ ದಯಾಳು ಹಾಗೂ ಎಲ್ಲರ ಸುಹೃದಯಿಯಾಗಿದ್ದಾನೆ-ಎಂದು ಯಾರು ಈ ರಹಸ್ಯವನ್ನು ತಿಳಿದು ಕೊಳ್ಳುತ್ತಾನೆಯೋ ಅವನಿಗೆ ತಕ್ಷಣವೇ ಪರಮ ಶಾಂತಿ ದೊರೆತುಬಿಡುತ್ತದೆ. ಭಗವಂತನು ಸ್ವತಃ ಹೇಳಿದ್ದಾನೆ-

***ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ॥***

(ಗೀತಾ ೫/೨೯)

'ಎಲೈ ಅರ್ಜುನ! ನನ್ನ ಭಕ್ತನು ನನ್ನನ್ನು ಸಕಲ ಚರಾಚರ ಪ್ರಾಣಿಗಳ ಸುಹೃದಯ ಅರ್ಥಾತ್ ಸ್ವಾರ್ಥರಹಿತ ದಯಾಳು ಮತ್ತು ಪ್ರೇಮಿ ಎಂದು ತತ್ತ್ವಶಃ ತಿಳಿದುಕೊಂಡು ಶಾಂತಿಯನ್ನು ಪಡೆದುಕೊಳ್ಳುತ್ತಾನೆ'.

ಸಾಧಾರಣ ರಾಜಾಧಿರಾಜ ಅಥವಾ ಸೇಠ್-ಸಾಹುಕಾರನ ವಿಷಯದಲ್ಲಿ-ಇಂತಹ ರಾಜ ಅಥವಾ ಸೇಠ್ ಬಹಳ ದಯಾಳು ಮತ್ತು

ಶಕ್ತಿಶಾಲಿಯೂ ಆಗಿದ್ದಾನೆ, ಅವನು ಎಲ್ಲರಮೇಲೆಯೂ ದಯೆಯಿಡುತ್ತಾನೆ ಮತ್ತು ನನ್ನನ್ನು ಭೇಟಿಮಾಡಲು ಇಚ್ಛಿಸುತ್ತಾನೆ ಮತ್ತು ಪ್ರೀತಿಯಿಡುತ್ತಾನೆ ಎಂದಾದರೆ ನಮಗೆ ಎಷ್ಟು ಆನಂದವುಂಟಾಗುತ್ತದೆ, ಎಷ್ಟು ಭರವಸೆ ಮೂಡುತ್ತದೆ, ಎಷ್ಟು ಶಾಂತಿ ದೊರೆಯುತ್ತದೆ ಮತ್ತು ಯಾವ ರೀತಿ ಅವನನ್ನು ಭೇಟಿಮಾಡಿ ಅವನ ದಯೆಯಿಂದ ಪ್ರಯೋಜನ ಪಡೆಯಲು ಪ್ರಯತ್ನ ನಡೆಯುತ್ತದೆ-ಇದನ್ನೆಲ್ಲಾ ನಾವು ಪ್ರತ್ಯಕ್ಷವಾಗಿ ನೋಡುತ್ತೇವೆ. ಸರ್ವಶಕ್ತ ಅಸಂಖ್ಯಾತ ಕೋಟಿ ಬ್ರಹ್ಮಾಂಡಗಳ ಒಡೆಯ ಭಗವಂತನ ವಿಷಯದಲ್ಲಿ ಆತನು ಪರಮ ದಯಾಳು, ಎಲ್ಲರ ಸುಹೃದಯಿ, ಆತ ನನ್ನನ್ನು ಪ್ರೀತಿಸಲು ಬಯಸುತ್ತಾನೆ, ನನ್ನ ಮೇಲೆ ಆತನಿಗೆ ಅಪಾರ ದಯೆಯಿದೆ, ನೋಡಬೇಕೆಂದು ಇಚ್ಛಿಸುವ ಭಕ್ತನನ್ನು ಆತ ಸ್ವತಃ ಭೇಟಿಯಾಗಲು ತಾನೂ ಇಚ್ಛಿಸುತ್ತಾನೆ ಎಂಬ ನಂಬಿಕೆಯಿದ್ದರೆ ಆ ಶ್ರದ್ಧಾವಂತ ಭಕ್ತನು ಭಗವಂತನ ಆ ದಯೆಯಿಂದ ಪರಮ ಲಾಭ ಪಡೆಯಲು ಪ್ರಯತ್ನಿಸುವುದರಲ್ಲಿ ಮತ್ತು ಅವನಿಗೆ ಪರಮ ಶಾಂತಿ ದೊರೆಯುವುದರಲ್ಲಿ ಆಶ್ಚರ್ಯವೇನು. ಈ ಪ್ರಕಾರ ಭಗವಂತನ ದಯೆಯ ರಹಸ್ಯವನ್ನು ತಿಳಿದುಕೊಳ್ಳುವನು. ಸ್ವತಃ ತಾನೂ ಸಹ ಪರಮ ದಯಾಳು ಮತ್ತು ಎಲ್ಲರ ಸುಹೃದಯಿ ಆಗಿಬಿಡುತ್ತಾನೆ. ಅವನಿಗೆ ಸ್ವತಃ ಭಗವಂತನೇ ಸಿಕ್ಕಿಬಿಡುತ್ತಾನೆ. ಅವನು ಭಗವಂತನಿಗೆ ಅತಿಶಯ ಪ್ರೀತಿ ಪಾತ್ರನಾಗುತ್ತಾನೆ, ಭಗವಂತನ ಮತ್ತು ಅವನ ಏಕತೆಯುಂಟಾಗುತ್ತದೆ.

ಹರಿಃ ಓಂ ತತ್ಸತ್

✪ ✪ ✪

# ಭಗವಂತನ ಹೇತುರಹಿತ ಸೌಹಾರ್ದ

ಭಗವಂತನು ದಯೆಯನ್ನು ತೋರಿಸಿಯೇ ಎಲ್ಲರನ್ನು ಉದ್ಧಾರಮಾಡುತ್ತಾನೆ. ಭಗವಂತನು ಅಪಾರ ಪ್ರೇಮಿ, ಬಹು ದಯಾಳು. ಭಗವಂತನು ಗೀತೆಯಲ್ಲಿ ತನ್ನ ವಿಷಯದಲ್ಲಿ ತಾನೇ ಹೇಳಿದ್ದಾನೆ-

*'ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ ।।'*

(೫/೨೯)

'ನನ್ನನ್ನು ಎಲ್ಲಾ ಭೂತ ಪ್ರಾಣಿಗಳ ಸುಹೃದಯೀ ಅರ್ಥಾತ್ ಸ್ವಾರ್ಥವಿಲ್ಲದ ಪ್ರೇಮಿ-ಎಂದು ತತ್ತ್ವಶಃ ತಿಳಿದುಕೊಂಡ ಸಾಧಕನು ಶಾಂತಿಯನ್ನು ಪಡೆದುಕೊಳ್ಳುತ್ತಾನೆ'.

ನಾವು ಭಗವಂತನನ್ನು ಪರಮ ದಯಾಳು, ಪರಮ ಪ್ರೇಮೀ, ಕಾರಣವಿಲ್ಲದೆ ದಯೆ ತೋರಿಸುವವನು, ಕಾರಣವಿಲ್ಲದೇ ಪ್ರೀತಿಸುವವನು ಎಂದು ಭಾವಿಸುತ್ತೇವೆಂದು ಹೇಳಿದರೆ, ನೀವು ಭಾವಿಸುವುದಿಲ್ಲ. ಕೇಳುವಿರಿ ಅಷ್ಟೆ ಎಂದು ಹೇಳಬಹುದು. ಭಗವಂತನು ಪರಮ ಪ್ರೇಮೀ ಎಂಬ ಮಾತನ್ನು ನಾವು ತಿಳಿದುಕೊಂಡರೆ ಆತನನ್ನು ಬಿಟ್ಟು ಬೇರೆ ಯಾರನ್ನೂ ಸಹ ನಾವು ಪ್ರೀತಿಸುವುದಿಲ್ಲ. ಆತನು ಪ್ರೇಮಕ್ಕೆ ಮಾರಲ್ಪಡುತ್ತಾನೆ. ಪ್ರೇಮಿಯು ಭಗವಂತನನ್ನು ಕೊಂಡುಕೊಳ್ಳುತ್ತಾನೆ ಮತ್ತು ಮಾರುವುದೂ ಸಹ ಉಂಟು. ಪ್ರೇಮಿಗೆ ಭಗವಂತನ ದರ್ಶನವಾಗುತ್ತದೆ, ಇದೇನೂ ಆಶ್ಚರ್ಯದ ಮಾತಲ್ಲ-

***ಹರಿ ಬ್ಯಾಪಕ ಸರ್ಬತ್ರ ಸಮಾನಾ।***
***ಪ್ರೇಮ ತೇ ಪ್ರಕಟ ಹೋಹಿಂ ಮೈ ಜಾನಾ।।***

ಭಗವಂತನು ಎಲ್ಲಾ ಕಡೆಗಳಲ್ಲಿಯೂ ವ್ಯಾಪಿಸಿದ್ದಾನೆ ಮತ್ತು ಪ್ರೇಮದಿಂದ ಪ್ರಕಟವಾಗುತ್ತಾನೆ- ಇದೊಂದು ನೀತಿ ಮಾತು; ಆದರೆ ಪ್ರೇಮದಿಂದ ಪ್ರಕಟನಾಗಿ ಅವನಿಗೆ ದರ್ಶನ ಕೊಡುತ್ತಾನೆಂಬುದಷ್ಟೇ ಅಲ್ಲ, ಆತನು ಪ್ರೇಮಿಗೆ ಅಧೀನನಾಗುತ್ತಾನೆ. *'ಅಹಂ ಭಕ್ತಪರಾಧೀನಃ'*- ನಾನು ಭಕ್ತರ ಅಧೀನನಾಗಿದ್ದೇನೆ. ಅಷ್ಟೇ ಅಲ್ಲ, ಭಕ್ತ ಮುಂದೆ ಮುಂದೆ ಹೋಗುತ್ತಾನೆ, ಆತ

ಹಿಂದೆ-ಹಿಂದೆ ಹೋಗುತ್ತಾನೆ. ಅವನ ಕಾಲಿನ ಧೂಳು ತನ್ನ ಮೇಲೆ ಬಿದ್ದರೆ ತನ್ನನ್ನು ಪವಿತ್ರನೆಂದು ಭಾವಿಸಿಕೊಳ್ಳುತ್ತಾನೆ-

***'ಅನುವ್ರಜಾಮ್ಯಹಂ ನಿತ್ಯಂ ಪೂಯೇಯೇತ್ಯಂಘ್ರಿ ರೇಣುಭಿಃ!'***

(ಶ್ರೀಮದ್ಭಾ ೧೧/೧೪/೧೬)

'ಅವನ ಚರಣ ಧೂಳಿ ಹಾರಿಬಂದು ನನ್ನ ಮೇಲೆ ಬೀಳಲಿ ಮತ್ತು ನಾನು ಪವಿತ್ರನಾಗಲಿ ಎಂದು ಯೋಚಿಸಿ ನಾನು ಆ ಮಹಾತ್ಮನ ಹಿಂದೆ-ಹಿಂದೆ ನಿರಂತರ ತಿರುಗುತ್ತಿರುತ್ತೇನೆ'.

ಏಕೆಂದರೆ ಭಕ್ತಿಗೆ ಅಂತಹ ಮಾನ್ಯತೆಯಿದೆ-

***'ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್'!***

(ಗೀತಾ ೪/೧೧)

'ಯಾರು ನನ್ನನ್ನು ಹೇಗೆ ಭಜಿಸುತ್ತಾರೆಯೋ, ನಾನೂ ಸಹ ಅವರನ್ನು ಹಾಗೆಯೇ ಭಜಿಸುತ್ತೇನೆ'.

ಅಷ್ಟೇ ಅಲ್ಲ, ಭಗವಂತನನ್ನು ಯಾವ ಭಕ್ತನು ಬೇಕಾದರೂ ಮಾರಬಲ್ಲ ಅಂದರೆ ಇತರರಿಗೆ ಕೊಟ್ಟುಬಿಟ್ಟರೆ, ಅವನು ನನ್ನನ್ನು ಕೊಡಬಹುದು ಎಂದು ಭಗವಂತ ಹೇಳುತ್ತಾನೆ. ಅಂತಹ ಕಥೆಗಳು ಬರುತ್ತವೆ. ನರಸೀ ಮೆಹತಾನಿಗಾಗಿ ಭಗವಂತನು ಹೇಳಿದ್ದಾನೆ-***'ಬೇಚೇ ತೋ ಬಿಕ್ ಜಾವೂ ನರಸಿ ಹ್ಮಾರೋ ಸಿರ ಧನೀ'*** ನರಸೀ ನನ್ನ ಒಡೆಯ. ನನ್ನನ್ನು ಮಾರಿದರೆ ನಾನು ಮಾರಲ್ಪಡುವೆನು.

ನರಸೀ ಮೆಹತಾ ಭಗವಂತನಿಗೆ ಏಳನೂರೈವತ್ತು ರೂಪಾಯಿಗಳ ಒಂದು ಹುಂಡಿಯನ್ನು ಬರೆದನು. ಹಣ ಕೊಟ್ಟು ಹುಂಡಿಯನ್ನು ತೆಗೆದುಕೊಂಡು ಅವರು ದ್ವಾರಕೆಗೆ ಹೋದರು. ಅಲ್ಲಿ ವಿಳಾಸ ಪತ್ತೆಯಾಗಲಿಲ್ಲ. ಜನರು ಕೇಳಿದರು-'ನಿಮಗೆ ಯಾವ ವಿಳಾಸ ತಿಳಿಸಿದರು?' ಅವರು ಹೇಳಿದರು-'ದ್ವಾರಕಾಧೀಶನ ದೇವಸ್ಥಾನದ ಹತ್ತಿರ ಶ್ಯಾಮಲಸಾಹು'. ಆಗ ಜನ ಹೇಳಿದರು-'ಇಲ್ಲಿ ಈ ಹೆಸರಿನವರು ಯಾರೂ ಇಲ್ಲ ಮತ್ತು ಯಾವ ಅಂಗಡಿಯೂ ಸಹ ಇಲ್ಲ. ನೀವು ಯಾರಿಂದಲೋ ಮೋಸಹೋಗಿರುವಿರಿ'. ಅವರು ಪಶ್ಚಾತ್ತಾಪ ಪಡುತ್ತಾ ಹಿಂದಿರುಗಿದರು ಮತ್ತು ಹೋಗಿ ನರಸೀಯವರ

ಮರ್ಯಾದೆ ಕಳೆಯಬೇಕೆಂದು ಯೋಚಿಸಿದರು. ರಾತ್ರಿಯಾಗಿತ್ತು ದ್ವಾರಕೆಯ ಮಂದಿರಕ್ಕೆ ಬಂದು ಮಲಗಿಕೊಳ್ಳಲು ಯೋಚಿಸಿದರು. ಬಹಳ ದುಃಖದಲ್ಲಿದ್ದರು. ಆದ್ದರಿಂದ ನಿದ್ರೆ ಬರಲಿಲ್ಲ. ಕೇವಲ ಮಗ್ಗಲಾಗಿದ್ದರು. ಅಷ್ಟರಲ್ಲಿ ಭಗವಂತನು ಬಂದು ಹೇಳಿದನು-'ಇಲ್ಲಿ ಯಾರ ಬಳಿಯಲ್ಲಾದರೂ ನನ್ನ ಹೆಸರಿನ ಏಳುನೂರೈವತ್ತು ರೂಪಾಯಿಗಳ ಹುಂಡಿಯಿದೆಯೇ? ನಾನು ಹುಂಡಿಯವರನ್ನು ಹುಡುಕುತ್ತಿದ್ದೇನೆ'. ಅದಕ್ಕೆ ಮಲಗಿದ್ದ ಆ ವ್ಯಕ್ತಿಯು ಹೇಳಿದರು- ' ನಾವೇ ಹುಂಡೀ ತೆಗೆದುಕೊಂಡು ಬಂದಿದ್ದೆವು, ಆದರೆ ತಮ್ಮ ಪತ್ತೆಯೇ ಆಗಲಿಲ್ಲ'. ಅದಕ್ಕೆ ಭಗವಂತನು ಹೇಳಿದನು- 'ನೀವು ಹಣ ತೆಗೆದುಕೊಳ್ಳಿ ಮತ್ತು ಹುಂಡಿಯನ್ನು ನನಗೆ ಕೊಟ್ಟುಬಿಡಿ', ಮತ್ತು ಆತನು ಏಳುನೂರೈವತ್ತು ರೂಪಾಯಿಗಳನ್ನು ಕೊಟ್ಟು ಹುಂಡಿಯನ್ನು ತೆಗೆದುಕೊಂಡನು ಹಾಗೂ ಪುನಃ ಹೇಳಿದನು- ನನ್ನದೊಂದು ಪ್ರಾರ್ಥನೆ-ಸಾಹುಕಾರರ ಬಳಿಹೋಗಿ ನನ್ನನ್ನು ದೂರಬಾರದು. ನಿಮ್ಮನ್ನೇ ನನ್ನ ಅಪರಾಧಕ್ಕಾಗಿ ಕ್ಷಮೆ ಕೇಳುತ್ತೇನೆ. ನನ್ನಿಂದ ದೊಡ್ಡ ತಪ್ಪಾಯಿತು. ನೀವು ಹುಡುಕುತ್ತಿದ್ದಂತೆಯೇ ರಾತ್ರಿಯಾಯಿತು. ನಾನು ಬರಲಿಲ್ಲ. ನನಗೆ ತಿಳಿಯಿತು, ಆಗ ಓಡಿ ಬಂದೆ, ಅಲ್ಲಿ ನನ್ನ ತಪ್ಪನ್ನು ವರ್ಣಿಸಬಾರದು. ನೀವೇ ನನ್ನನ್ನು ಕ್ಷಮಿಸಿಬಿಡಿ'. ಅವರು ಹೇಳಿದರು-'ನೋಡಿ ಪಾಪ ಒಳ್ಳೆಯ ಮನುಷ್ಯ ನಾವು ಹೊರಟು ಹೋಗುತ್ತಿದ್ದೆವು. ನರಸೀಯನ್ನು ಬೈಯ್ಯುತ್ತಿದ್ದೆವು, ಮರ್ಯಾದೆ ಕಳೆಯುತ್ತಿದ್ದೆವು. ಇವನಾದರೋ ಮನೆಗೆ ಬಂದು ಹುಂಡಿಯ ಬೆಲೆಯನ್ನೂ ಪಾವತಿ ಮಾಡಿಬಿಟ್ಟನು'. ಅವರೆಲ್ಲರೂ ಎರಡನೇ ಸಾರಿ ಪುನಃ ನರಸೀ ಹತ್ತಿರ ಹೋಗಿ ಹೇಳಿದರು-'ಪುನಃ ಹುಂಡಿ ಕೊಡಿ'. ನರಸೀ ಹೇಳಿದರು - ಯಾರಿಗೆ? ಹೇಳಿದರು-'ಶ್ಯಾಮಲಸಾಹುರವರಿಗೆ'. ನಿಮ್ಮ ಗುಮಾಸ್ತೆಯು ಬಹಳ ಒಳ್ಳೆಯ ಮನುಷ್ಯ. ನಮಗೆ ಹುಂಡಿಯ ಮೌಲ್ಯವನ್ನು ನಮ್ಮ ಮನೆಗೆ ಬಂದು, ನಾವು ಹಿಂದಿರುಗಿ ಹೋಗುತ್ತಿದ್ದಾಗ ಕೊಟ್ಟು ಹೋದರು ಮತ್ತು ಹೇಳಿದರು-'ನನ್ನ ತಪ್ಪನ್ನು ಕ್ಷಮಿಸಿಬಿಡುವುದು. ಅವನದೇನೂ ತಪ್ಪಿರಲಿಲ್ಲ, ಅವನು ನಮಗೆ ತನ್ನ ಸ್ಥಳದಲ್ಲಿ ಸಿಕ್ಕಲಿಲ್ಲ, ಆದರೆ ಹುಡುಕುತ್ತಾ ನಮ್ಮ ಹತ್ತಿರಕ್ಕೆ ಬಂದುಬಿಟ್ಟನು. ನಿಮ್ಮ ಗುಮಾಸ್ತನಾದರೋ ಮೇಲ್ದರ್ಜೆಯವನು'. ನರಸೀ ಹೇಳಿದರು-

'ನಿಮ್ಮದು ಅಹೋಭಾಗ್ಯ, ಅವನು ಸಾಕ್ಷಾತ್ ಭಗವಂತ. ನಿಮಗೆ ಆತನ ದರ್ಶನವಾಯಿತು, ನಿಮಗೆ ನನ್ನ ನಮಸ್ಕಾರ. ಅಲ್ಲಿ ನಮ್ಮದು ಯಾವ ಅಂಗಡಿಯೂ ಇಲ್ಲ, ಯಾವ ಗುಮಾಸ್ತನೂ ಇಲ್ಲ, ನೀವು ನಮಗೆ ಅಂಟು ಬಿದ್ದಿದ್ದರಿಂದ ಭಗವಂತನ ನಂಬಿಕೆಯ ಮೇಲೆ ಹುಂಡಿ ಬರೆದುಕೊಟ್ಟೆವು. ಹುಂಡಿ ಫಲಿಸಿತು, ನಿಮ್ಮದು ಅಹೋಭಾಗ್ಯ'. ಅವರು ಪಶ್ಚಾತ್ತಾಪ ಪಟ್ಟರು. ಅವರು ದ್ವಾರಕಾ ಪಟ್ಟಣಕ್ಕೆ ಹೋಗಿ ನೋಡಿದರು. ಆದರೆ ಆ ಅಂಗಡಿಯವನು ಈಗ ಅಲ್ಲೆಲ್ಲಿ ಸಿಕ್ಕಬೇಕು. ಇದೊಂದು ರೀತಿಯಲ್ಲಿ ಭಗವಂತನನ್ನು ಮಾರಾಟ ಮಾಡಿದಂತೆ. ಹುಂಡಿಯನ್ನು ನಗದಾಗಿಸುವುದೂ ಒಂದು ರೀತಿಯ ಮಾರಾಟ. ಭಗವಂತನ ಭಕ್ತ ಬೇರೆಯವರಿಗೂ ಸಹ ಭಗವಂತನ ದರ್ಶನ ಮಾಡಿಸಬಲ್ಲನು. ಸ್ವತಃ ತನಗೇ ಭಗವಂತನ ದರ್ಶನವಾದರೆ ಇದರಲ್ಲಿ ಸಂಶಯವೇನಿದೆ.

ಭಗವಂತನ ಪ್ರೇಮದ ವಿಷಯ ಬಹಳ ಗಹನವಾಗಿದೆ. ಅದನ್ನು ತಿಳಿಸಲು ವಾಣಿಗೆ ಬಲವೇ ಇಲ್ಲ, ಕಲ್ಪನೆ ಮಾಡಿ ಉದಾಹರಣೆ ಕೊಟ್ಟು ವಾಣಿಗೆ ಆಜ್ಞೆಮಾಡುವಷ್ಟು ಶಕ್ತಿ ಮನಸ್ಸಿಗೂ ಇಲ್ಲ, ಬುದ್ಧಿಗೂ ಸಹ ಸಾಮರ್ಥ್ಯವಿಲ್ಲ. ಅಸಂಖ್ಯಾತ ಬ್ರಹ್ಮಾಂಡಗಳ ಒಡೆಯನಿಗೆ ನಮ್ಮಂತಹ ತುಚ್ಛ ಪ್ರಾಣಿಗಳೊಡನೆ ಸ್ನೇಹವೇ ಎಂದು ತಿಳಿದುಕೊಳ್ಳಬೇಕು. ನಮಗೂ ಆತನಿಗೂ ಏನು ಸಮಾನತೆ. ಅದೂ ಸಹ ಐಶ್ವರ್ಯದಿಂದ ಆತನ ಪ್ರಭಾವವನ್ನೂ ತಿಳಿಯಲು ನಾನು ಅಸಂಖ್ಯಾತ ಬ್ರಹ್ಮಾಂಡದ ಒಡೆಯನೆಂದು ತಿಳಿಸಿದೆ, ಇದು ಭಗವಂತನ ಉಪಮಾನ, ಆತನ ಪ್ರಭಾವ ತೀರಾ ಕೆಳಮಟ್ಟದ್ದಾಗಿದೆ. ಓಹೋ! ಅಸಂಖ್ಯಾತ ಬ್ರಹ್ಮಾಂಡಗಳ ಒಡೆಯ ತೀರಾ ಕೆಳಮಟ್ಟದವನೇ? ಇದು ಐಶ್ವರ್ಯವನ್ನು ಇಚ್ಛಿಸುವ ಪುರುಷರಿಗಾಗಿ. ಐಶ್ವರ್ಯಮಯ ರೂಪವನ್ನೇನೋ ತಿಳಿಸಿದನು. ಒಂದಕ್ಕಲ್ಲ, ಇಪ್ಪತ್ತಕ್ಕಲ್ಲ, ಲಕ್ಷ ಬ್ರಹ್ಮಾಂಡಗಳ ಒಡೆಯ. ಭಗವಂತನನ್ನು ಹಾಗೆಂದು ತಿಳಿದುಕೊಂಡರೆ ಒಂದೆರಡು ಬ್ರಹ್ಮಾಂಡವನ್ನೇನೋ ಕೊಟ್ಟಾನು, ಆದರೆ ಬ್ರಹ್ಮಾಂಡದ ಐಶ್ವರ್ಯದಿಂದ ಆತನನ್ನು ಅಳೆಯುತ್ತೇವಲ್ಲವೆ? ಭಗವಂತನು ಐಶ್ವರ್ಯ ಶಾಲಿಯೇನೋ ಆಗಿದ್ದಾನೆ. ಹೇಗೆಂದರೆ, ಸಾವಿರಾರು ಗ್ರಾಮಗಳ ಒಡೆಯ

ರಾಜನಿರುವಂತೆ, ಆತನು ಸಾವಿರಾರು ಬ್ರಹ್ಮಾಂಡಗಳ ಒಡೆಯನಾಗಿದ್ದಾನೆ. ರಾಜನು ಪ್ರಸನ್ನನಾದರೆ ಒಂದೆರಡು ಗ್ರಾಮಗಳನ್ನು ಕೊಟ್ಟುಬಿಡ್ಡುವನು. ಭಗವಂತನು ಪ್ರಸನ್ನನಾದರೆ ಅವನನ್ನು ಒಂದೆರಡು ಬ್ರಹ್ಮಾಂಡಗಳ ಐಶ್ವರ್ಯ ಶಾಲೀ ಅಥವಾ ಬ್ರಹ್ಮನನ್ನಾಗಿ ಮಾಡಿ ಬಿಡುವನು, ಆದರೆ ಭಗವಂತನ ವಿಷಯದಲ್ಲಿ ನಿನ್ನ ಬುದ್ಧಿಯಾದರೋ ಇದೇ ಆಯಿತು.

ಭಗವಂತನು ಪ್ರೇಮಮಯ, ಆನಂದಮಯ, ಚಿನ್ಮಯ, ಜ್ಞಾನಮಯ ನಾಗಿದ್ದಾನೆ, ನೀನು ಸ್ವಲ್ಪವಾದರೂ ಸಹ ಇದರ ಕಲ್ಪನೆಯನ್ನೇ ಮಾಡಲಿಲ್ಲ. 'ನನ್ನ ಆತ್ಮ ಅಲ್ಪಜ್ಞ, ಪರಮಾತ್ಮ ಸರ್ವಜ್ಞ, ನಾನು ಘಟಾಕಾಶದಂತೆ ಮತ್ತು ಪರಮಾತ್ಮ ಮಹಾಕಾಶದಂತೆ-ಎಂದು ತಿಳಿ. ಪರಮಾತ್ಮನ ಉದಾರತೆಯನ್ನು ನೋಡು- ಘಟಾಕಾಶದಂತೆ ಒಂದು ಜೀವವು ಪರಮಾತ್ಮನಿಗೆ ಶರಣಾಗತ ವಾದರೆ ಮಹಾಕಾಶದಂತಿರುವ ಪರಮಾತ್ಮನು ತನ್ನನ್ನೇ ಅದಕ್ಕೆ ಅರ್ಪಿಸಿ ಬಿಡುವನು.

ಯಾರು ತನ್ನನ್ನೇ ಭಗವಂತನಿಗೆ ಸಮರ್ಪಿಸಿಬಿಡುತ್ತಾನೆಯೋ, ಅವನಿಗೆ ಭಗವಂತನೂ ಸಹ ತನ್ನನ್ನೇ ಅರ್ಪಿಸಿಕೊಳ್ಳುತ್ತಾನೆ. ಇದು ಆತನ ಉದಾರತೆ. ತನ್ನ ಸಾಮರ್ಥ್ಯ ಎಷ್ಟು! ಒಂದು ತುಚ್ಛ! ನಾವಾದರೋ ಅಲ್ಪಜ್ಞರು, ಕೀಳುಮಟ್ಟದವರು, ಪರಮಾತ್ಮನು ಮಹಾನ್. ಆತನ ಮಹತ್ವದ ಕಡೆಗೆ ಅಭಿರುಚಿಯಿಡು. ಆತ ಮಹಾನ್ ಜ್ಞಾನಸ್ವರೂಪಿ, ಚೇತನಸ್ವರೂಪೀ. ಆ ಸರ್ವಜ್ಞನಾದ ಪರಮಾತ್ಮನು ತನ್ನ ಸರ್ವಜ್ಞತೆಯನ್ನು ಅವರಿಗೆ ಅರ್ಪಿಸಿಬಿಡು ತ್ತಾನೆ, ನಾವು ನಮ್ಮ ಅಲ್ಪಜ್ಞತೆಯನ್ನು ಆತನಿಗೆ ಅರ್ಪಿಸುತ್ತೇವೆ. ಆತನ ಸರ್ವಜ್ಞತೆಯ ಕಡೆಗೂ ಗಮನಕೊಡು. ನಿನ್ನ ಅಲ್ಪಜ್ಞತೆಯ ಕಡೆಗೂ ಗಮನಕೊಡು. ಆಗ ನೀನು ಆತನನ್ನು ಜ್ಞಾನದೊಡನೆ ಸರ್ವಜ್ಞತೆಯೊಡನೆ ಹೋಲಿಸಿದೆ. ನೀನು ಐಶ್ವರ್ಯದೊಡನೆ ಹೋಲಿಸಿದರೆ ಏನು ಹೋಲಿಸಿ ದಂತೆ? ಇದೆಲ್ಲವೂ ನಾಶವಾಗುವ ಮತ್ತು ಮಿಥ್ಯವಾದ ವಸ್ತುಗಳು. ನೀನು ಭಗವಂತನನ್ನು ಸ್ವಲ್ಪವೂ ತಿಳಿದುಕೊಳ್ಳಲಿಲ್ಲ. ಆತನನ್ನು ಆತ್ಮದೊಡನೆ ಹೋಲಿಕೆ ಮಾಡಬೇಕಾಗಿತ್ತು. ಮನುಷ್ಯನು ಈ ಪ್ರಕಾರ ತಿಳಿದುಕೊಂಡಾಗ ಅವನು ಪರಮಾತ್ಮನನ್ನು ಬಿಟ್ಟು ಮತ್ತೆ ಯಾರನ್ನೂ ಪ್ರೀತಿಸಲಾರನು. ಅವನು

ಐಶ್ವರ್ಯವನ್ನು ನೋಡಿ ಮೋಹಕ್ಕೊಳಪಡುವುದಿಲ್ಲ. ಅವನು ಹೀಗೆ ತಿಳಿದುಕೊಳ್ಳುತ್ತಾನೆ - ಇದು ಸ್ವಪ್ನದಂತೆ ಕೇವಲ ಮಾಯೆ, ಏನೂ ಸಹ ಇಲ್ಲ. ಪರಮಾತ್ಮನನ್ನು ಪ್ರೀತಿಸುವ ಪ್ರೇಮಿಗೆ ಆತನು ಮಾರಿಕೊಳ್ಳುತ್ತಾನೆ. ಆತನು ಸರ್ವಸ್ವವನ್ನೂ ಕೊಟ್ಟು ಬಿಡುತ್ತಾನೆ. ಪ್ರೇಮಕ್ಕೆ ಪ್ರತಿಯಾಗಿ ತನ್ನನ್ನೇ ಅರ್ಪಿಸಿಬಿಡುತ್ತಾನೆ. ವ್ಯಕ್ತಿಯ ಪ್ರೇಮವನ್ನು ಪಡೆದು ಅದಕ್ಕೆ ಬದಲಾಗಿ ಭಗವಂತನು ತನ್ನನ್ನು ತಾನೇ ಸಮರ್ಪಿಸಿಕೊಳ್ಳುವುದು ಎಷ್ಟು ಮಹತ್ತರವಾದ ಪ್ರೀತಿ! ಎಷ್ಟೊಂದು ಉದಾರತೆ.

## ದಯೆಯ ಮಾತು

ಭಗವಂತನು ದಯೆಯ ಸಾಗರ ಎಂಬ ಉದಾಹರಣೆಯನ್ನು ನಾವು ಕೊಟ್ಟರೆ, ಈ ಉದಾಹರಣೆಯೂ ಸಹ ಕೆಳಮಟ್ಟದ್ದೇ ಆಗಿರುತ್ತದೆ. ಏಕೆಂದರೆ ಸಾಗರವೂ ಸಹ ಎಲ್ಲೆಯುಳ್ಳದ್ದು. ಭಗವಂತನ ದಯೆಗೆ ಯಾವ ಎಲ್ಲೆಯೂ ಇಲ್ಲ. ಇಡೀ ಪ್ರಪಂಚದಲ್ಲಿ ಯಾವ ದಯೆಯಿದೆಯೋ ಅದು ಆ ದಯಾ ಸಾಗರದ ಒಂದು ತೊಟ್ಟು. ಈ ಉದಾಹರಣೆಯೂ ಸರಿಯಲ್ಲ. ಉದಾಹರಣೆಯು ಅದಕ್ಕೆ ಇಲ್ಲವೇ ಇಲ್ಲ. ನನ್ನನ್ನು ದಯಾಳುವೆಂದು ಭಾವಿಸಿಕೊಂಡರೆ ಪರಮ ಶಾಂತಿ ದೊರೆಯಲಿ ಎಂದು ಪರಮಾತ್ಮ ಹೇಳುತ್ತಾನೆ. ಆದರೆ ದಯೆಯ ತತ್ತ್ವವನ್ನು ನಾವು ತಿಳಿದುಕೊಂಡೇ ಇಲ್ಲ.

ನಾವು ಅದಕ್ಕೆ ಯೋಗ್ಯರಲ್ಲವೆಂದು ಭಾವಿಸಿಕೊಂಡಾಗ, ಅದೇನೋ ಸರಿಯೇ ಹೌದು. ಆದರೆ ಜೊತೆಗೆ ಭಗವಂತನ ದರ್ಶನ ನಮಗೆ ಅಸಂಭವವೆಂದೂ ಭಾವಿಸಿಕೊಂಡಾಗ ನಿರಾಶರಾಗಿ ಕುಳಿತುಕೊಳ್ಳುತ್ತೇವೆ. ನಿರಾಶರಾಗುವುದಕ್ಕೆ ಆತನ ಅಪಾರ ಕೃಪೆಯ ವಿಷಯದಲ್ಲಿ ಸರಿಯಾಗಿ ತಿಳಿದುಕೊಳ್ಳದಿರುವುದೇ ಸರಿ. ಪರಮಾತ್ಮನು ಬಹು ದೊಡ್ಡ ದಯಾಳು ವೆಂದೂ, ನಾವು ನಮ್ಮ ಅವಗುಣಗಳ ಕಡೆಗೆ ನೋಡಿಕೊಳ್ಳುವುದೇ ಇಲ್ಲವೆಂದೂ ತಿಳಿದುಕೊಂಡರೆ ನಮ್ಮ ಹೃದಯದಲ್ಲಿ ನಿರಾಶೆಯು ಎಂದಿಗೂ ಸಹ ಬರಲಾರದು. ಭಗವಂತನು ತನ್ನ ಪ್ರಸಿದ್ಧಿಯ ಕಡೆಗೆ ನೋಡಿ ದರ್ಶನ

ಕೊಡುತ್ತಾನೆ. ಈ ತತ್ತ್ವರಹಸ್ಯವನ್ನು ತಿಳಿದುಕೊಂಡಿದ್ದರೆ ಎಂದಿಗೂ ನಾವು ನಿರಾಶರಾಗುತ್ತಿರಲಿಲ್ಲ. ಭಗವಂತನು ಎಷ್ಟು ದಯಾಳುವೆಂದರೆ, ನಾವು ಇಷ್ಟೊಂದು ಅಪರಾಧ ಮಾಡುತ್ತಿದ್ದರೂ ಸಹ ಆತನು ಅದಕ್ಕೆ ಶಿಕ್ಷೆ ಕೊಡುತ್ತಾ ಇಲ್ಲ. ಆತನ ದರ್ಶನ ಉಂಟಾಗುವುದಿಲ್ಲ-ಇದೇ ಶಿಕ್ಷೆ ಕೊಡುತ್ತಾನೆ, ಇದನ್ನೇ ಬೇಕಾದರೆ ಶಿಕ್ಷೆಯೆಂದು ಭಾವಿಸಿಕೋ. ಭಗವಂತನು ನಮ್ಮ ಅವಗುಣಗಳ ಕಡೆಗೆ ಗಮನವನ್ನೇ ಕೊಡದಿರುವಾಗ ನಮ್ಮ ಅವಗುಣಗಳ ಕಡೆಗೆ ನೋಡಿ ಭಗವಂತನು ದರ್ಶನ ಕೊಡುವುದಿಲ್ಲವೆಂದು ನಾವು ಏಕೆ ಹೇಳಬೇಕು? ಭಗವಂತನಾದರೋ ನಮ್ಮ ಅವಗುಣಗಳ ಕಡೆಗೆ ಗಮನ ಹರಿಸುವುದೇ ಇಲ್ಲ ಮತ್ತು ನಾವು ನಮ್ಮ ಅವಗುಣಗಳ ಕಡೆಗೆ ಭಗವಂತ ಗಮನವಿಡುತ್ತಾನೆಂಬುದನ್ನು ನಿಶ್ಚಯ ಮಾಡಿಕೊಳ್ಳುತ್ತೇವೆ. ಅಂದಮೇಲೆ ಭಗವಂತ ದಯಾಳು ಹೇಗೆ? ನಾವು ಅವನನ್ನು ಪರಮ ದಯಾಳುವೆಂದು ತಿಳಿದುಕೊಂಡಾಗ, ನಾವು ಆತನ ಖ್ಯಾತಿಯಲ್ಲಿ ಉತ್ಸಾಹ ಮತ್ತು ವಿಶ್ವಾಸವಿಟ್ಟುಕೊಂಡು ನಮಗೆ ಭಗವಂತನ ದರ್ಶನ ಖಂಡಿತ ಉಂಟಾಗುವುದು ಎಂದು ತಿಳಿಯುತ್ತೇವೆ. ನಮ್ಮ ಮನಸ್ಸಿಗೆ ಇಂತಹ ನಂಬಿಕೆಯುಂಟಾದಾಗ ನಾವು ದರ್ಶನದಿಂದ ಎಂದಿಗೂ ವಂಚಿತರಾಗುವುದಿಲ್ಲ. ಭಗವಂತ ಎಷ್ಟೊಂದು ದಯಾಳುವಾಗಿದ್ದಾನೆ, ನಾವು ತಿಳಿಯುವುದೆಲ್ಲಿ! ಭಗವಂತನನ್ನು ದಯಾಳುವೆಂದು ಭಾವಿಸಿಕೊಂಡರೂ ಸಹ ನಾವು ದರ್ಶನದಿಂದ ವಂಚಿತರಾಗಿರುವುದಾದರೆ ದಯೆಯ ಪ್ರಭಾವವನ್ನು ಕಿಂಚಿತ್ತೂ ಸಹ ತಿಳಿದುಕೊಂಡಿಲ್ಲ. ನಾವು ನಿಜವಾಗಿಯೂ ಭಗವಂತನನ್ನು ದಯಾಳುವೆಂದು ತಿಳಿದುಕೊಂಡೇ ಇಲ್ಲ. ಭಗವಂತನು ಪಾತ್ರನಿಗೆ ದರ್ಶನ ಕೊಡುತ್ತಾನೆಂಬುದು ನೀತಿಯೇ ಆಗಿದೆ, ಇದರಲ್ಲೇನು ಆಶ್ಚರ್ಯವಿಲ್ಲ. ಯಾರು ಜಿಜ್ಞಾಸುವಾಗಿರುತ್ತಾನೋ, ಶ್ರದ್ಧಾಳುವಾಗಿರುತ್ತಾನೋ, ಅವರಿಗೆ ಭಗವಂತನು ದರ್ಶನಕೊಡುತ್ತಾನೆ. ಯಾರು ಪ್ರೇಮಿಯಾಗಿರುತ್ತಾನೆಯೋ ಅವನಿಗೆ ದರ್ಶನ ಕೊಡುತ್ತಾನೆಂಬುದೂ ನ್ಯಾಯವೇ ಆಗಿದೆ, ಭಗವಂತನಾದರೋ ಒಂದು ರೀತಿಯಲ್ಲಿ ಯಾರೇ, ಎಂತಹ ನೀಚ ಅಥವಾ ಪಾಪಿಯೇ ಆಗಿರಲಿ, ಅವರ ಕಡೆಗೆ ನೋಡದೇ ಅಪಾತ್ರನಿಗೂ ಸಹ ದರ್ಶನ ಕೊಡುತ್ತಾನೆ. ಕುಪಾತ್ರನಿಗೂ ಸಹ

ದರ್ಶನ ಕೊಡುತ್ತಾನೆ, ಎಂತಹ ಕುಪಾತ್ರ ಮತ್ತು ನೀಚನೇ ಆಗಿರಲಿ, ಕೇವಲ ಭಗವಂತನು ಎಲ್ಲರಿಗೂ ಸಹೃದಯಿಯಾಗಿದ್ದಾನೆ, ಕಾರಣವಿಟ್ಟುಕೊಳ್ಳದೆ ದಯೆ ತೋರಿಸುತ್ತಾನೆ, ಪ್ರೀತಿಸುತ್ತಾನೆಂದು ಭಾವಿಸಬೇಕು.

ನಾವು ಪಾತ್ರರಲ್ಲ, ಆದ್ದರಿಂದ ಭಗವಂತನು ನಮಗೆ ದರ್ಶನ ಕೊಡುವುದಿಲ್ಲ-ಎಂದು ಭಾವಿಸಿಕೊಂಡರೆ-'ಭಗವಂತನು ಕಾರಣವಿಲ್ಲದೆ ದಯೆಯಿಡುವವನು, ಪ್ರೀತಿಸುವವನು,' ಎಂಬ ಆತನ ಈ ಸಹೃದಯ ಭಾವವನ್ನು ನಾವು ಎಲ್ಲಿ ತಿಳಿದುಕೊಂಡೆವು? ಕಾರಣವಿಟ್ಟುಕೊಂಡೇ ಭಗವಂತ ದಯೆ ತೋರಿಸುತ್ತಾನೆಂದು ನಾವು ತಿಳಿದು ಕೊಂಡೆವು. ನಿಜವಾಗಿಯೂ ಆತನು ಹೇತುರಹಿತ ದಯೆ ತೋರಿಸುವವನು. ನಮಗೆ ಈ ಮಾನವ ಶರೀರ ದೊರೆತಿರುವುದಾದರೂ ಆತನ ಕಾರಣಾರಹಿತ ಕೃಪೆಯ ಪರಿಣಾಮ ಮಾತ್ರ. ನಮ್ಮ ಆಚರಣೆಗಳನ್ನು ನೋಡಿ ಇದನ್ನು ಆತ ಕೊಟ್ಟಿರುವನೇನು?

ಕಾರಣ ರಹಿತನಾಗಿಯೇ ಭಗವಂತ ದಯೆ ತೋರಿಸುತ್ತಾನೆ, ಆತ ಪ್ರೇಮಿ, ದಯಾಳು, ಆದುದರಿಂದ ತನ್ನ ಖ್ಯಾತಿಯ ಕಡೆ ನೋಡಿ ದರ್ಶನ ಕೊಡುತ್ತಾನೆ. ಜೀವರುಗಳ ಕಡೆಗೆ ನೋಡಿ ಯೋಚಿಸಿದ್ದೇ ಆದರೆ ಮನುಷ್ಯರ ಸೃಷ್ಟಿಯೇ ಆಗಬಾರದು. ಮನುಷ್ಯರ ಸೃಷ್ಟಿಯಾಗುತ್ತದೆ, ಆ ಭಗವಂತನು ದಯೆತೋರಿಸಿಯೇ ಮನುಷ್ಯರನ್ನು ಸೃಷ್ಟಿಸುತ್ತಾನೆ. ಆಚರಣೆಗಳ ಕಡೆ ನೋಡಿದ್ದೇ ಆದರೆ ಮನುಷ್ಯನ ಶರೀರ ಸಿಕ್ಕುವ ಸಂಭವವೇ ಇರುತ್ತಿರಲಿಲ್ಲ, ಆದರೆ ಏನು ಮಾಡುವುದೆಂದು ಭಗವಂತ ನೋಡುತ್ತಾನೆ, ಎಲ್ಲರಿಗೂ ಅವಕಾಶ ಕೊಡಬೇಕು, ಕುಪಾತ್ರನಾಗಲಿ, ಅಪಾತ್ರನಾಗಲೀ ಎಲ್ಲರಿಗೂ ಅವಕಾಶವನ್ನು ಕೊಡುತ್ತಾನೆ.

ಒಂದು ರೀತಿಯಿಂದ ಭಗವಂತನು ಇಚ್ಛಿಸುವುದಿಲ್ಲವೆಂದು ನಮಗೆ ಕಂಡುಬಂದರೂ, ಅದನ್ನೂ ಸಹ ಭಗವಂತ ಬಯಸುತ್ತಾನೆ. ಭಗವಂತ ನಾದರೋ ದರ್ಶನ ಕೊಡಲು ಕಾತುರನಾಗಿರುತ್ತಾನೆ. ಕೇವಲ ನಿಮಿತ್ತರನ್ನು ಮಾತ್ರ ರಚಿಸುತ್ತಾನೆ. ಏನಾದರೂ ನೆಪ ಸಿಕ್ಕಿದರೂ ಸರಿ, ಯಾವ ಕಾರಣವುಂಟಾದರೂ ಸರಿ. 'ಭಗವಂತನು ಪಾತ್ರ-ಕುಪಾತ್ರಗಳನ್ನು ನೋಡು

ವುದಿಲ್ಲ, ಬಹು ದಯಾಳು'- ಎಂದಿಷ್ಟನ್ನೇ ನಾವು ಹೃದಯ ತುಂಬಿ ದೃಢಪಡಿಸಿಕೊಳ್ಳಬೇಕು. ಆತನ ಹೃದಯದಲ್ಲಿ ದಯೆ ಬಂದು ಬಿಡುತ್ತದೆ. ಒಬ್ಬ ತಾಯಿ ಎಲ್ಲರಿಗೂ ತಿಂಡಿ-ಮೃಷ್ಟಾನ್ನ ಕೊಡುತ್ತಾಳೆ- ಒಬ್ಬ ಹುಡುಗ ಕುಪಾತ್ರ ಮತ್ತು ಮೂರ್ಖ, ಅವನಿಗೂ ಸಹ ಕೊಡದೇ ಇದ್ದರೆ ಆಕೆಯ ಮನಸ್ಸು ಒಪ್ಪದು, ಆದರೆ ಆ ಹುಡುಗನ ಮುಂದೆ ಇಟ್ಟು, ಆ ಹುಡುಗ ಕೋಪದಿಂದ ಅದನ್ನು ಎಸೆದು ಬಿಟ್ಟರೆ ತಾಯಿ ಏನು ಮಾಡುವುದು? ಇದೇ ಪ್ರಕಾರ ಭಗವಂತನು ದಯೆ ತೋರಿಸಿ ತನ್ನ ದರ್ಶನ ಕೊಡಲು ಸಿದ್ಧನಾಗಿದ್ದಾನೆ, ಆದರೆ ನಾವು ದರ್ಶನ ಪಡೆಯುತ್ತಾ ಇಲ್ಲ. ನಾವು ಆತನ ದಯೆಯ ರಹಸ್ಯವನ್ನು ತಿಳಿದಿಲ್ಲ, ಆದರ ಶಿಕ್ಷೆಯೇ ಇದು. ದಯೆಯ ರಹಸ್ಯವನ್ನು ತಿಳಿದುಕೊಂಡಿದ್ದರೆ ನಾವು ನಮ್ಮ ಆಚರಣೆಯ ಕಡೆಗೆ ಏಕೆ ನೋಡುತ್ತಿದ್ದೆವು. ಭಗವಂತನ ಪ್ರಖ್ಯಾತಿಯ ಕಡೆಗೇ ನೋಡುತ್ತಿದ್ದೆವು ಮತ್ತು ಪ್ರಖ್ಯಾತಿಯ ಕಡೆಗೆ ನೋಡಿದ್ದರೆ ಭಗವಂತನು ಸಿಕ್ಕದೇ ಹೇಗೆ ತಾನೇ ಇರುತ್ತಿದ್ದನು? ನಮ್ಮಲ್ಲಿಯೇ ಕೊರತೆಯಿದೆ. ನಾವು ಭಗವಂತನ ಪ್ರಭಾವ ವನ್ನು ತಿಳಿದೇ ಇಲ್ಲ, ಅಲ್ಲದೆ ಆತನನ್ನು ನಿರ್ದಯಿಯೆಂದು ಭಾವಿಸಿ ಕೊಂಡಿದ್ದೇವೆ. ನಿರ್ದಯಿ ಎಂದು ಅಂದುಕೊಳ್ಳುವುದರ ಅಭಿಪ್ರಾಯ ಹೀಗಿದೆ- ದಯಾಳುವೆಂದು ಭಾವಿಸಿದರೆ, ಆತನ ದಯೆಗೆ ಮುಗ್ಧರಾಗಿ ಹೋಗಿ ಆತನ ಅಪಾರ ದಯೆ ಹೇಗಿದೆಯೆಂದು ಮಾರುಹೋಗುತ್ತಿದ್ದೆವು.

ಒಬ್ಬ ಮನುಷ್ಯ ಭಗವಂತನ ದರ್ಶನವನ್ನು ಬಯಸುವುದಿಲ್ಲ ಎಂದು ಕಂಡುಬಂದರೆ, ಅವನಿಗೂ ಸಹ ಭಗವಂತ ದರ್ಶನಕೊಡುತ್ತಾನೆ. ಆದಾಗ್ಯೂ ಸಹ ಅವನು ಸ್ವೀಕರಿಸಿಕೊಳ್ಳದಿದ್ದರೆ ಭಗವಂತ ಮಾಡುವುದೇನು? ದುರ್ಯೋಧನ ಭಗವಂತನ ದರ್ಶನಕ್ಕೆ ಪಾತ್ರನಾಗಿದ್ದನೇ? ಶ್ರೀಕೃಷ್ಣ ಪರಮಾತ್ಮನು ತನ್ನ ಅವತಾರದ ರೂಪದಲ್ಲಿ ದುರ್ಯೋಧನಿಗೂ ಹಾಗೂ ಬೇರೆಯವರಿಗೂ ದರ್ಶನ ಕೊಡುತ್ತಾ ಇದ್ದನು. ಆಗ ನೀವು ಹೀಗೂ ಹೇಳಬಹುದು- ಇವನು ಮನುಷ್ಯನೋ ಅಥವಾ ಪರಮಾತ್ಮನೋ ಹೇಗೆ ತಿಳಿದುಕೊಳ್ಳುವುದು? ಆದರೆ ದುರ್ಯೋಧನನ ಸಭೆಯಲ್ಲಿ ಅವನಿಗೆ ವಿಶ್ವರೂಪವನ್ನು ಪ್ರಕಟಿಸಿ ತೋರಿಸಿದಾಗಲಾದರೂ ಅವನು ತಿಳಿದುಕೊಳ್ಳಬೇಕಾಗಿತ್ತು. ಇಂತಹ ರೂಪವನ್ನು

ಯಾವ ಮನುಷ್ಯನಾದರೂ ಧರಿಸಲು ಸಾಧ್ಯವೇ? ಭಗವಂತನು ಅಪಾತ್ರ ನಿಗೂ ಸಹ ಆಕಾಂಕ್ಷೆ ಪಡದಿದ್ದರೂ, ಕೇಳಿಕೊಳ್ಳದಿದ್ದರೂ ಪ್ರಕಟಗೊಂಡು ದರ್ಶನ ಕೊಟ್ಟನು. ಆದರೆ ಆ ದರ್ಶನವನ್ನು ಪಡೆದುಕೊಂಡರೂ ಸಹ ಈತ ಸಾಕ್ಷಾತ್ ಭಗವಂತನೆಂದು ತಿಳಿದುಕೊಳ್ಳಲಿಲ್ಲ. ದರ್ಶನ ಪಡೆದರೂ ಸಹ ಪರಮಾತ್ಮನ ಪ್ರಾಪ್ತಿಯಿಂದ ವಂಚಿತನಾದನು. ಅಂದ ಮೇಲೆ ಭಗವಂತನ ದಯೆಯಲ್ಲಿ ಯಾವ ಕೊರತೆಯೂ ಇಲ್ಲ.

ವಿಷ ಕೊಟ್ಟ ಪೂತನಿಗೂ ಸಹ ಭಗವಂತನು ಮುಕ್ತಿ ಕೊಟ್ಟಿದ್ದನು. ನನ್ನೊಡನೆ ಇವಳಿಗೆ ಯಾವ ಪ್ರಕಾರವಾದರೂ ಸರಿ ಸಂಬಂಧ ಉಂಟಾದರೆ ಅದರ ಕಡೆಗೇನು ನೋಡಲಿ. ನಾನು ನನ್ನ ಕಡೆಗೆ ನೋಡುವೆನು. ನನ್ನ ಕರ್ತವ್ಯದ ಕಡೆಗೆ ನೋಡುವೆನು. ಆದರೆ ಭಗವಂತನು ಭಕ್ತನ ಕರ್ತವ್ಯದ ಕಡೆಗೆ ನೋಡುವುದಿಲ್ಲ. ಇತರೇ ದುಷ್ಟರ ಕರ್ತವ್ಯದ ಕಡೆಗೂ ನೋಡುವು ದಿಲ್ಲ ಅಂದ ಮೇಲೆ ಭಕ್ತರ ಕರ್ತವ್ಯದ ಕಡೆಗೆ ನೋಡುವನೇನು? ತನ್ನ ಖ್ಯಾತಿಯ ಕಡೆಗೇ ನೋಡುತ್ತಾನೆ ಮತ್ತು ತನ್ನ ಖ್ಯಾತಿಯ ಕಡೆಗೆ ನೋಡುವಾಗ ನಾವುಗಳೆಲ್ಲರೂ ಪಾತ್ರರಾಗಿ ಹೋಗುತ್ತೇವೆ. ಆದರೆ ಭಗವಂತನ ದಯೆಯನ್ನು ನಾವು ಸ್ವೀಕರಿಸದಿರುವಾಗ ಭಗವಂತನ ಉಪಾಯ ವೇನು? ಭಗವಂತನು ಪರಮ ದಯಾಳುವೆಂಬಿಷ್ಟು ಮಾತನ್ನಾದರೂ ನಾವು ಸ್ವೀಕಾರ ಮಾಡಬೇಕು. ನಾವು ಭಗವಂತನ ದಯೆಯ ಕಡೆಗೆ ನೋಡಿದಾಗ ಮುಗ್ಧರಾಗಿ ಹೋಗುವೆವು. ನಂತರ ಭಗವಂತನನ್ನು ಬಿಟ್ಟು ನಾವು ಇರಲಾರೆವು.

ಮಗು ತಾಯಿಯ ದಯೆಯ ಪ್ರಭಾವವನ್ನು ಸ್ವಲ್ಪ ತಿಳಿಯುತ್ತದೆ. ಒಂದೆರಡು ವರ್ಷದ ಚಿಕ್ಕ ಮಗು ತಾಯಿಯನ್ನು ಬಿಟ್ಟು ದೂರವಿರಲು ಇಚ್ಛಿಸುವುದಿಲ್ಲ. ತಾಯಿ ಅದನ್ನು ಬಿಟ್ಟು ಹೊರಟು ಹೋದರೆ ಅದು ಅಳುತ್ತಲೇ ಇರುತ್ತದೆ. ಅದಕ್ಕೆ ಅಳುವುದನ್ನು ಬಿಟ್ಟರೆ ಬೇರೆ ಉಪಾಯವಿಲ್ಲ. ಆದರೆ ನಾವುಗಳಾದರೋ ಅಳುವುದೇ ಇಲ್ಲ. ತಾಯಿಯ ಪ್ರಭಾವವನ್ನು ಮಗು ಎಷ್ಟೊಂದು ತಿಳಿಯುತ್ತಾ ಇದೆ - ತಾಯಿ ನನ್ನವಳು, ಅವಳು ಬಹಳ ದಯಾಳು, ನನ್ನನ್ನು ಬಹಳವಾಗಿ ಪ್ರೀಸುತ್ತಾಳೆ, ಹೀಗೆಂದು ತಿಳಿದು

ಕೊಳ್ಳುವುದು ಚಿಕ್ಕಮಗು ತಾಯಿಯ ವಿಯೋಗವನ್ನು ನಿರಾಕರಿಸಲಾರದು. ಆದರೆ ನಾವು ಭಗವಂತನ ವಿಯೋಗವನ್ನು ನಿರಾಕರಿಸುತ್ತಿದ್ದೇವೆ, ಆದುದ ರಿಂದ ಇದು ವಿಯೋಗವಾಗಿದೆ.

ನಮಗೆ ಭಗವಂತನ ದರ್ಶನವಾಗುವುದರಲ್ಲಿ ಯಾವ ವಿಳಂಬವಾಗುತ್ತಿ ದೆಯೋ, ಅದು ಭಗವಂತನ ಸಹೃದಯತೆಯ ತತ್ತ್ವವನ್ನು ತಿಳಿದುಕೊಳ್ಳದೇ ಇರುವುದರ ಪರಿಣಾಮ. ಭಗವಂತ ಎಲ್ಲರಿಗೂ ಸಹೃದಯನೇ, ಈ ರೀತಿ ನಾವು ತಿಳಿದುಕೊಳ್ಳುವವರಾದರೆ ವಿಳಂಬವಾಗಲಾರದು. ಭಗವಂತನಲ್ಲಿ ಶ್ರದ್ಧೆ, ಪ್ರೇಮವನ್ನಿಟ್ಟುಕೊಳ್ಳದ ಪುರುಷರಿದ್ದಾರೆ, ಭಗವಂತನನ್ನು ಒಪ್ಪದಿರುವ ಪುರುಷರೂ ಇದ್ದಾರೆ, ಆತನ ದಯೆಯ ತತ್ತ್ವ-ರಹಸ್ಯವನ್ನು ತಿಳಿಯದ ಪುರುಷರೂ ಉಂಟು, ಆತನ ಪ್ರೇಮದ ತತ್ತ್ವವನ್ನು ತಿಳಿಯದಿರುವ ಪುರುಷರಿದ್ದಾರೆ, ಆತನನ್ನು ಬಯಸದಿರುವವರಿಗೂ ಸಹ ಭಗವಂತ ದರ್ಶನ ಕೊಡಲು ಪ್ರಯತ್ನ ಮಾಡುತ್ತಾನೆ. ಯಾರು ಇಚ್ಛಿಸುತ್ತಾರೆಯೋ ಅವರಿಗಾಗಿ ಏಕೆ ಪ್ರಯತ್ನ ಪಡುವುದಿಲ್ಲ? ಉತ್ತಂಕನಿಗೆ ಈತ ಭಗವಂತನೆಂದು ಗೊತ್ತಿರಲಿಲ್ಲ, ಹಾಗೆ ಗೊತ್ತಿರದಿದ್ದರೂ ಸಹ 'ನಾನು ಸಾಕ್ಷಾತ್ ಭಗವಂತನು! ನನಗೆ ಶಾಪ ಕೊಡಬೇಡ, ಶಾಪ ಕೊಡುವುದರಿಂದ ನಿನ್ನ ಗುರು-ಭಕ್ತಿ ಹಾಳಾಗಿ ಹೋಗುವುದು. ಗುರುವಿನ ಸೇವೆಯ ಫಲ ಹಾಳಾಗಿ ಹೋಗು ವುದು. ನಾನೇ ಸಾಕ್ಷಾತ್ ಪರಮೇಶ್ವರ, ನನಗೆ ಶಾಪ ತಟ್ಟುವುದಿಲ್ಲ, ನಾನು ಈಗ ಮನುಷ್ಯನ ರೂಪದಲ್ಲಿ ಅವತರಿಸಿದ್ದೇನೆ. ನಾನು ಸಾಕ್ಷಾತ್ ಪೂರ್ಣಬ್ರಹ್ಮ ಪರಮಾತ್ಮನು. ಯಾವಾಗ ಪ್ರಪಂಚದಲ್ಲಿ ಕೋಲಾಹಲ ಉಂಟಾಗುತ್ತದೆಯೋ ಆಗಾಗ ಅವತಾರ ತಾಳುತ್ತೇನೆ. ನಾನು ಕೂರ್ಮ, ಮತ್ಸ್ಯ, ವರಾಹ ರೂಪಗಳಲ್ಲಿ ಪ್ರಕಟವಾಗುತ್ತೇನೆ. ದೇವಯೋನಿ, ಮನುಷ್ಯ ಯೋನಿ, ಪಶುಯೋನಿಯಲ್ಲಿ ಆವಶ್ಯಕತಾನುಸಾರ ಪ್ರಕಟವಾಗುತ್ತೇನೆ. ತತ್ಕಾ ಲದಲ್ಲಿ ಮನುಷ್ಯ ಯೋನಿಯಲ್ಲಿ ಪ್ರಕಟವಾಗಿದ್ದೇನೆ'-ಎಂದು ತಿಳಿಸಿದನು. ಆಗ ಅವನು ಹೇಳಿದನು-'ನೀನು ಸಾಕ್ಷಾತ್ ಪರಮಾತ್ಮನೇ ಆಗಿದ್ದರೆ ನನಗೆ ನಿನ್ನ ವಿಶ್ವರೂಪವನ್ನು ತೋರಿಸು'. ಭಗವಂತನು ಅವನಿಗೆ ತನ್ನ ವಿಶ್ವರೂಪವನ್ನು ತೋರಿಸಿದನು. ಆದರೆ ಭಗವಂತನೇ ಅವನಿಗೆ ಪರಿಚಯ ಮಾಡಿಕೊಟ್ಟನು.

ಇವನು ಆತ್ಮೋದ್ಧಾರಕ್ಕಾಗಿ ಬಹು ಭಾರಿ ಗುರುಭಕ್ತಿ ಸಂಪಾದಿಸಿದ್ದಾನೆ, ಇವನ ಆತ್ಮೋದ್ಧಾರವಾಗಲೇ ಬೇಕು ಎಂದು ಭಗವಂತನು ಯೋಚಿಸಿದನು. ಆತನು ದರ್ಶನ ಕೊಟ್ಟು ಆತನನ್ನು ಉದ್ಧಾರ ಮಾಡಿದನು. ಇಲ್ಲಿ ಅವನ ಕಡೆಯಿಂದ ಭಗವಂತನಲ್ಲಿ ಬೇಡಿಕೆಯಿರಲಿಲ್ಲ, ಭಗವಂತನನ್ನು ತಿಳಿದೇ ಇರಲಿಲ್ಲ, ಅಂದ ಮೇಲೆ ಬೇಡುವುದೆಲ್ಲಿ? ಈ ಪ್ರಕಾರ ಭಗವಂತನು ಹುಡುಕಿ-ಹುಡುಕಿ ಉದ್ಧಾರ ಮಾಡುತ್ತಿರುವಾಗ ಭಗವಂತನನ್ನು ಪಡೆಯಲು ಇಚ್ಛಿಸುವವರಿಗೆ ಆತನು ದರ್ಶನಕೊಡದೆ ಇನ್ನಾರಿಗೆ ಕೊಡುತ್ತಾನೆ? ಎಂತಹ ಪಾಪಿಯೇ ಆಗಿರಲಿ 'ಭಗವಂತ ಸಹೃದಯಿ' ಎಂದು ತಿಳಿದುಕೊಳ್ಳುವುದರಿಂದಲೇ ಅವನ ಪಾಪವೆಲ್ಲಾ ಕರಗಿಹೋಗುತ್ತದೆ. ಗುಹೆಯೊಳಗಿನ ಅನೇಕ ವರ್ಷಗಳ ಕಗ್ಗತ್ತಲೆಯು ವಿದ್ಯುತ್ ಪ್ರಕಾಶದ ಪ್ರವೇಶದಿಂದ ಮಾಯವಾಗಿ ಹೋಗುತ್ತದೆ. ಅದೇ ಪ್ರಕಾರ ಎಷ್ಟೇ ಅಜ್ಞಾನವಿದ್ದರೂ, ಜ್ಞಾನವುಂಟಾಗುವುದರೊಡನೆಯೇ ಅಂಧಕಾರ ಹಾಳಾಗಿ ಹೋಗುವುದು. ಪಾಪಗಳ ಎಷ್ಟೇ ರಾಶಿಯಿದ್ದರೂ, ಜ್ಞಾನಾಗ್ನಿಯಿಂದ ಎಲ್ಲವೂ ಸುಟ್ಟು ಭಸ್ಮವಾಗಿ ಹೋಗುತ್ತದೆ-

**'ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂ ಬುಧಾಃ'।**

(ಗೀತಾ ೪/೧೯)

'ಆ ಜ್ಞಾನರೂಪೀ ಅಗ್ನಿಯಿಂದ ಭಸ್ಮವಾದ ಕರ್ಮಗಳುಳ್ಳ ಪುರುಷನನ್ನು ಜ್ಞಾನಿಗಳೂ ಸಹ ಪಂಡಿತನೆಂದು ಹೇಳುತ್ತಾರೆ'.

ಜೊತೆಗೆ-

***ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ।***
***ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ॥***

(ಗೀತಾ ೪/೩೬)

ಭಗವಂತನು ಅರ್ಜುನನಿಗೆ ಹೇಳಿದನು-'ನೀನು ಎಲ್ಲಾ ಪಾಪಿಗಳಿಗಿಂತಲೂ ಸಹ ಅಧಿಕ ಪಾಪ ಮಾಡುವವನೇ ಆಗಿದ್ದರೂ ಸಹ ಜ್ಞಾನರೂಪೀ ನೌಕೆಯ ಮೂಲಕ ನಿಸ್ಸಂದೇಹವಾಗಿ ಸಂಪೂರ್ಣ ಪಾಪಗಳಿಂದ ಚೆನ್ನಾಗಿ ಪಾರಾಗಿ ಹೋಗುವೆ'.

ಆದರೆ ತಿಳಿದೂ-ತಿಳಿದೂ ಪಾಪ ಮಾಡಬಾರದು. ಹಿಂದಿನ ಪಾಪಗಳಿಗಾಗಿ ಭಗವಂತ ಅಕಾರಣವಾಗಿಯೇ ದಯೆ, ಪ್ರೇಮವಿಟ್ಟಿರುತ್ತಾನೆಂದು ನಾವು ತಿಳಿದು ಕೊಳ್ಳಬೇಕು. ಆತನ ಕೃಪೆಯಿಂದಲೇ ಪಾಪಗಳೆಲ್ಲಾ ನಾಶವಾಗಿ ಹೋಗುವುವು. ಭಗವಂತನಲ್ಲಿ ಅಪಾರ ದಯೆಯಿದೆ. ಈ ವಿಚಾರವನ್ನು ಗ್ರಹಿಸಿದ ನಂತರ ಯಾವ ಪಾಪಿಯೂ ಸಹ ಆತನ ದಯೆಯಿಂದ ವಂಚಿತನಾಗಿರಲಾರನು. ನಾವಾದರೋ ಪಾಪಿಗಳು, ಆದರೆ ಭಗವಂತನು ನಿರ್ದಯಿಯಲ್ಲ. ನಾವು ನಮ್ಮನ್ನು ಪಾಪಿಯೆಂದು ಭಾವಿಸಿಕೊಂಡು ಭಗವಂತನನ್ನು ನಿರ್ದಯನೆಂದು ಭಾವಿಸಿದರೆ, ನಾವು ಈ ಅಪರಾಧ ಮಾಡುತ್ತೇವೆ. ನಮ್ಮ ಪಾಪಗಳಿಂದಾಗಿ ಹೀಗೆ ಭಾವಿಸುತ್ತೇವೆ-'ನಮ್ಮ ಉದ್ಧಾರವಾಗುವುದು ಕಠಿಣ, ಅಸಂಭವ, ಆಗಲಾರದು'- ಈ ರೀತಿ ತಿಳಿದುಕೊಳ್ಳುವುದು ಭಗವಂತನ ದಯೆಯನ್ನು ತಿರಸ್ಕಾರ ಮಾಡಿದಂತೆ. ನಮ್ಮ ಮನೆಯಲ್ಲಿ ಎಂದಿನಂತೆ ಅಂಧಕಾರವಿದೆ. ಅದು ಸೂರ್ಯನಿಂದಲೂ ಸಹ ಹೋಗಲಾರದು, ಹೀಗೆ ಭಾವಿಸುವುದು ಮೂರ್ಖತನ. ಈ ಅಂಧಕಾರ ಸೂರ್ಯಭಗವಂತನು ಉದಯವಾಗುವವರೆಗೂ ಇರುತ್ತದೆ. ಸೂರ್ಯ ಪರಮಾತ್ಮನು ಎಲ್ಲರ ಮೇಲೆಯೂ ದಯೆಯಿಟ್ಟು ದಿನವೂ ಉದಯಿಸುತ್ತಾನೆ. ರಾತ್ರಿಯಲ್ಲಿ ನಾವು ಹೀಗೆ ಯೋಚಿಸಬೇಕು- ಈ ದಿವಸ ಸೂರ್ಯ ಉದಯಿಸುವನು ಮತ್ತು ಈ ಅಂಧಕಾರವು ಸೂರ್ಯೋದಯವಾದ ಕೂಡಲೇ ದೂರವಾಗುವುದು. ನಾವು ಬೆಳಕಿನಲ್ಲಿ ಯಾವ ಕೆಲಸ ಮಾಡಬೇಕೋ ಅದನ್ನು ಸೂರ್ಯನ ಬೆಳಕಿನಲ್ಲಿ ಮಾಡಬೇಕು. ಪ್ರಾತಃಕಾಲಕ್ಕೆ ಬೆಳಕು ಖಂಡಿತ ಬರುವುದು, ನಾನು ಯಾರಿಗಾಗಿ ಉದಯಿಸಲಿ, ಯಾರಿಗಾಗಿ ಬೇಡ ಎಂದು ಸೂರ್ಯ ನೋಡುವುದಿಲ್ಲ, ಅವನು ಉದಯವಾಗುತ್ತಲೇ ಇರುತ್ತಾನೆ. ಉದಯಿಸಿದರೂ ಸಹ ಗೂಬೆಗೆ ಕಾಣಿಸುವುದಿಲ್ಲ, ಅದರ ಕಣ್ಣುಗಳು ಮುಚ್ಚಿಹೋಗುತ್ತವೆ. ಆದರೆ ಇದರಲ್ಲಿ ಸೂರ್ಯನ ದೋಷವೇನೂ ಇಲ್ಲ, ಭಗವಂತನ ದಯೆಯು ಸೂರ್ಯನ ಪ್ರಕಾಶದಂತೆ ಉದಯವಾಗಿದೆ, ನಾವು ಕಣ್ಣುಗಳನ್ನು ಮುಚ್ಚಿಕೊಂಡರೆ ನಮಗೆ ಅಂಧಕಾರವೇ ಅಗಾಧವಾಗಿ ಕಾಣಿಸುತ್ತದೆ. ನಾವು ದಯೆಯಿಂದ ಲಾಭ

ಪಡೆಯದೇ ಹೋದರೆ ಅದು ನಮ್ಮ ಮೂರ್ಖತನ. ದಯೆಯ ಮುಂದೆ ಇತರರ ಚಿಕ್ಕ-ದೊಡ್ಡ ಅಪರಾಧ ಯಾವುದೂ ಇಲ್ಲ. ನಮ್ಮ ಕರ್ತವ್ಯದಿಂದಲೇ ನಮ್ಮ ಉದ್ಧಾರವಾಗುವುದಾದರೆ ಮತ್ತೆ ದಯೆ ಏನು! ಆಗುವುದೂ ಭಗವಂತನ ದಯೆಯಿಂದ. ನಾವು ಹೀಗೆ ತಿಳಿದುಕೊಳ್ಳುತ್ತೇವೆ- ನಮ್ಮ ಉದ್ಧಾರ ನಮ್ಮ ಕರ್ತವ್ಯದಿಂದ ಆಗುವುದು, ನಾವಿನ್ನೂ ಆ ಮಟ್ಟಕ್ಕೆ ಏರಿಲ್ಲ. ಆ ಮಟ್ಟಕ್ಕೆ ತಲುಪಿದರೆ ಆಗ ನಮ್ಮ ಉದ್ಧಾರವಾಗುವುದು. ನಮ್ಮದು ಎಂತಹ ಭಾವನೆಯೋ ಅಂತಹುದೇ ಫಲ ನಮಗೆ ದೊರೆಯುತ್ತದೆ. ಪಾತ್ರರಾದಾಗಲೇ ಉದ್ಧಾರವಾಗುವುದು. ಭಗವಂತನ ದಯೆ ಪಾತ್ರ-ಕುಪಾತ್ರರೆಂಬುದನ್ನು ನೋಡುವುದಿಲ್ಲವೆಂದು ನಾವು ತಿಳಿದುಕೊಂಡಾಗ ನಾವು ದಯೆಯಿಂದ ಏಕೆ ವಂಚಿತರಾಗಿರುತ್ತೇವೆ? ಭಗವಂತನ ದಯೆಯ ಪ್ರಭಾವವನ್ನು ನಾವು ಒಪ್ಪುವುದಿಲ್ಲ, ಅಲ್ಲದೆ ಇಷ್ಟು ದಯಾಳುವಾದ ಭಗವಂತನನ್ನು ನಿರ್ದಯೀ ಯೆಂದು ತಿಳಿದುಕೊಳ್ಳುತ್ತೇವೆ. ಇದು ಒಂದು ಪ್ರಕಾರದ ಅಪರಾಧವೇ ಸರಿ.

ಪರಮ ದಯಾಳು ಪರಮಾತ್ಮನನ್ನು ನಿರ್ದಯಿಯೆಂದು ತಿಳಿದು ಕೊಳ್ಳುವುದೇ? ನಾವು ದಯೆಗೆ ಪಾತ್ರರಲ್ಲ, ಆದುದರಿಂದ ವಂಚಿತರಾಗಿ ದ್ದೇವೆ. ಭಗವಂತನ ಮುಂದೆ ಎಲ್ಲರೂ ದಯೆಗೆ ಪಾತ್ರರೇ ಆಗಿದ್ದಾರೆ. ನಾವು ದಯೆಗೆ ಪಾತ್ರರಲ್ಲವೆಂದು ಭಾವಿಸುತ್ತೇವೆ, ಆದ್ದರಿಂದ ಅಪಾತ್ರರಾಗಿದ್ದೇವೆ. ಭಗವಂತನಾದರೋ ನೀನು ದಯೆಗೆ ಪಾತ್ರನೆಂದೇ ನಿರ್ಣಯಿಸಿದ್ದಾನೆ. ಎಲ್ಲರ ಮೇಲೆಯೂ ಭಗವಂತನ ಅಪಾರ ದಯೆಯಿದೆ. ಆತನು ದಯೆಯ ಭಂಡಾರವನ್ನೇ ತೆರೆದಿಟ್ಟಿದ್ದಾನೆ. ಬಹಿರಂಗವಾಗಿ ಹಂಚುತ್ತಿದ್ದಾನೆ. ಒಬ್ಬ ಹೇಳುತ್ತಾನೆ- ನಾನು ಅಲ್ಲಿಗೆ ಹೋಗಿ ಏನು ಮಾಡಲಿ? ಅದಕ್ಕೆ ಮತ್ತೊಬ್ಬ ಹೇಳಿದನು-ಏಕೆ ಹೋಗಲಿಲ್ಲ? ಅವನು ಹೇಳಿದನು-ಅವರು ಹಸಿದವರಿಗೆ ಕೊಡುತ್ತಾರೆ, ನನಗೆ ಸಿಕ್ಕುವುದಿಲ್ಲ. ನೀನು ಹೋಗಿ ನೋಡಿದೆಯಾ? ನನಗೆ ನಂಬಿಕೆಯಿಲ್ಲ, ಅಲ್ಲಿ ಸಿಕ್ಕುವುದೋ ಇಲ್ಲವೋ. ಆದರೆ ನೀನು ಆ ದಾತಾ (ಕೊಡುಗೈಯವನು) ನನ್ನು ನಿರ್ದಯಿಯೆಂದು ತಿಳಿದುಕೊಂಡೆ, ಅಲ್ಲಾದರೋ ಬಹಿರಂಗ ಸಭೆಯಿದೆ, ಯಾರಾದರೂ ತೆಗೆದುಕೊಂಡು ಬರಬಹುದು. ಅಲ್ಲಿ ಸಿಕ್ಕುವುದೇ ಇಲ್ಲವೆಂದು ನೀನೇಕೆ ಭಾವಿಸಿಕೊಂಡೆ?

ಅದಕ್ಕೆ ಅವನು ಹೇಳಿದನು-ನಾನು ಜನರಿಂದ ಕೇಳಿದ್ದೆನು, ಅದರಿಂದ ಗೊತ್ತಾಯಿತು, ಅಲ್ಲಿ ಕೇವಲ ಭಿಕ್ಷುಕರಿಗೆ ದೊರೆಯುತ್ತದೆಯಂತೆ. ಆದ್ದರಿಂದ ನಾನು ಅದಕ್ಕೆ ಪಾತ್ರನಲ್ಲ. ಭಗವಂತನ ಮುಂದೆ ಎಲ್ಲರೂ ಭಿಕ್ಷುಕರೇ, ಎಲ್ಲರೂ ಪಾತ್ರರೇ, ಭಗವಂತನು ತನ್ನ ದೃಷ್ಟಿಯಿಂದ ಎಲ್ಲರನ್ನೂ ಪಾತ್ರರೆಂದು ತಿಳಿಯುತ್ತಾನೆ.

ನಿರಾಕಾರದ ಉಪಾಸಕರಿಗೆ ಭಗವಂತನು ದರ್ಶನ ಕೊಡಲು ಬಾಧ್ಯನಲ್ಲ-ಎಂಬೀ ಮಾತು ಸರಿ, ಆದರೂ ಭಕ್ತಿಭಾವವುಳ್ಳವರಿಗಾದರೋ ಆತನು ಬಾಧ್ಯನು-

***ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ।***
***ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ॥***

(ಗೀತಾ ೧೧/೫೪)

ಶ್ರೀಕೃಷ್ಣ ಪರಮಾತ್ಮನು ಹೇಳಿದ್ದಾನೆ- 'ಎಲೈ ಶ್ರೇಷ್ಠ ತಪಸ್ವಿ ಅರ್ಜುನ! ಅನನ್ಯ ಭಕ್ತಿಯಿಂದ ಈ ಪ್ರಕಾರ ಚತುರ್ಭುಜ ರೂಪವುಳ್ಳ ನಾನು ಪ್ರತ್ಯಕ್ಷವಾಗಿ ನೋಡುವುದಕ್ಕೂ ಮತ್ತು ತತ್ತ್ವದಿಂದ ಅರ್ಥಾತ್ ಯಥಾರ್ಥವಾಗಿ ತಿಳಿದುಕೊಳ್ಳುವುದಕ್ಕೂ ಹಾಗೂ ಪ್ರವೇಶ ಮಾಡುವುದಕ್ಕೂ ಅಂದರೆ ಏಕಭಾವದಿಂದ ಪಡೆದುಕೊಳ್ಳುವುದಕ್ಕೂ ಸಹ ಶಕ್ಯನಾಗಿದ್ದೇನೆ'.

ಭಕ್ತನಿಗೇನೋ ಬಾಧ್ಯನಾಗಿದ್ದಾನೆ, ನಿರ್ಗುಣ-ನಿರಾಕಾರದ ಉಪಾಸಕ ನಿಗೆ ದರ್ಶನವೀಯಲು ಬಾಧ್ಯನಲ್ಲ. ಆದರೆ ಅವನಿಗೆ ದರ್ಶನಕೊಡುವುದೇ ಇಲ್ಲ ಎಂಬುದೇನೋ ಇಲ್ಲ. ಬಯಸದಿರುವವರಿಗೂ ಕೊಡುವುದಿಲ್ಲ ಎಂಬುದೂ ಇಲ್ಲ, ಯಾರು ಕುಪಾತ್ರರೋ, ಅಪಾತ್ರರೋ ಅವರನ್ನು ಉದ್ಧಾರ ಮಾಡುವುದಿಲ್ಲ, ಇಂತಹ ಮಾತೇನೂ ಇಲ್ಲ.

ಭಗವಂತನಾದರೋ ಕಾರಣವಿಲ್ಲದೆಯೇನೋ ಎಲ್ಲರ ಮೇಲೂ ದಯೆ ಮತ್ತು ಪ್ರೇಮವಿಟ್ಟಿರುತ್ತಾನೆ-ಎಂದು ನಾವು ಹೇಳುತ್ತೇವೆ. ಆದರೆ ಒಪ್ಪುವು ದಿಲ್ಲ, ತಿಳಿದುಕೊಳ್ಳುವುದೂ ಇಲ್ಲ. ಒಪ್ಪುವುದರಿಂದಲೇ ಅವನು ಮುಂದೆ ತಿಳಿಯುತ್ತಾನೆ. ಮೊದಲು ನಂಬಿ ಒಪ್ಪಿ, ಆದರೆ ನಾವು ಹಾಗೇಕೆ ಒಪ್ಪಬೇಕೆಂದು ಜಂಭಪಡುತ್ತೇವೆ. ಭಗವಂತನನ್ನು ಭಗವಂತನೆಂದು ಒಪ್ಪಿ

ಕೊಳ್ಳಲೂ ಸಹ ನಮಗೆ ಸಂಕೋಚವಾಗುತ್ತದೆ, ನಾಚಿಕೆಯಾಗುತ್ತದೆ. ಒಪ್ಪುವುದರಿಂದ ಆನಂತರ ತಿಳಿದುಕೊಳ್ಳುವರು. ನೀವು ಸ್ವೀಕರಿಸಿಕೊಳ್ಳಲೇ ಬೇಕು ಸ್ವೀಕಾರ ಮಾಡಿಕೊಳ್ಳಲು ಯೋಗ್ಯನಾದರೋ ಭಗವಂತನೊಬ್ಬನೇ. ಆದರೆ ನಾವು ಸ್ವೀಕಾರಮಾಡಿಕೊಳ್ಳುವುದೇ ಇಲ್ಲ.

ಕನ್ಯೆಗೆ ವರಸಿರುವಂತೆ, ಅವನು ಅವಳಿಗಾಗಿ ವರಿಸಲು ಯೋಗ್ಯ ಪತಿಯಾಗಲು ಯೋಗ್ಯಪತಿಯೆಂದು ಭಾವಿಸಲು ಯೋಗ್ಯ, ಆದರೆ ಕನ್ಯೆ ಪತಿ ಮಾಡಿಕೊಳ್ಳಲು ಅವನನ್ನು ಇಚ್ಛಿಸುವುದಿಲ್ಲ. ಸ್ವಾಮಿಗೆ ಯೋಗ್ಯನೆಂದು ಒಪ್ಪದಿದ್ದರೆ ವರನು ಏನು ಉಪಾಯ ಮಾಡುವನು? ಆದರೆ ಪ್ರಪಂಚದಲ್ಲಿ ಸ್ವಾಮಿ ಎನ್ನಿಸಿಕೊಳ್ಳಲು ಯೋಗ್ಯನಾದವನು ಏಕಮಾತ್ರ ಪರಮಾತ್ಮ ನೊಬ್ಬನೇ! ಆತನನ್ನೂ ಸಹ ನಾವು ಸ್ವಾಮಿ ಎಂದು ಭಾವಿಸಲು ಇಚ್ಛಿಸುವುದಿಲ್ಲ, ಆಗ ನಮಗೆ ದುರ್ಗತಿಯುಂಟಾದರೆ ಇದರಲ್ಲಿ ಸ್ವಾಮಿಯ ದೋಷವೇನು? ಯೋಗ್ಯವರನನ್ನೂ ಸಹ ಕನ್ಯೆಯು ಸ್ವೀಕರಿಸಿಕೊಳ್ಳದಿದ್ದರೆ ಮತ್ತು ಅವಳು ಅವಿವಾಹಿತಳಾಗಿಯೇ ಇದ್ದರೆ ಆ ಕನ್ಯೆಯ ಅಜ್ಞಾನವದು. ಪ್ರಯುಕ್ತ ಭಗವಂತನನ್ನು ಸ್ವಾಮಿಯೆಂದು ಭಾವಿಸಿಕೊಳ್ಳಬೇಕು. ಬೇಕಾದರೆ ಸ್ವಾಮಿ ಅನುಮೋದಿಸದೇ ಇರಲಿ, ಆದರೆ ಆತನ ಅಸ್ತಿತ್ವವನ್ನು ನಂಬುವುದರಿಂದಲೇ ಮನುಷ್ಯನಿಗೆ ಬಹಳ ಉಪಯೋಗವಾಗುತ್ತದೆ. ಭಗವಂತ ನಿದ್ದಾನೆ, ಅದು ನಿಶ್ಚಯವೆಂದು ಭಾವಿಸಿಕೊಳ್ಳುವುದರಲ್ಲೂ ಸಹ ಬಹಳ ಲಾಭವುಂಟು. ಆತ ಸ್ವಾಮಿ ಎಂದು ಭಾವಿಸಿಕೊಳ್ಳಲು ಯೋಗ್ಯನಾಗಿದ್ದಾನೆ. ಆದ್ದರಿಂದ ಯಾರು ಆತನನ್ನು ಸ್ಮರಿಸುತ್ತಾರೋ, ಆತನ ಧ್ಯಾನಮಾಡುತ್ತಾರೋ ಅವರ ಉದ್ಧಾರವಾಗುವುದರಲ್ಲಿ ಸಂದೇಹವೇನು? ಗಾಯತ್ರೀ ಮಂತ್ರಕ್ಕೂ ಸಹ ಈ ಸಿದ್ಧಾಂತವಿದೆ-ಅದರಲ್ಲಿ **'ವರೇಣ್ಯಮ್'** ಅದಕ್ಕೂ ನಾನು ತಿಳಿಸಿದ ಈ ಅರ್ಥವಿದೆ. ಭಗವಂತನನ್ನು ಈ ಶಬ್ದದ ಅರ್ಥವೆಂದು ಭಾವಿಸಿಕೊಂಡರೆ ಅವನು ಪಾತ್ರನಾಗಿಹೋದ.

ಭಗವಂತನನ್ನು ನಿಮ್ಮ ಸ್ವಾಮಿ ಎಂದು ಸ್ವೀಕಾರ ಮಾಡಿಕೊಳ್ಳಿ. ಭಗವಂತನನ್ನು ಯಾರು ಸ್ವಾಮಿಯೆಂದು ಸ್ವೀಕಾರ ಮಾಡಿಕೊಳ್ಳುವುದಿಲ್ಲವೋ ಅವನ ಉದ್ಧಾರಕ್ಕಾಗಿಯೂ ಸಹ ಮಹಾತ್ಮರುಗಳ ಹಾಗೆ ಭಗವಂತನೂ

ಯತ್ನಿಸುತ್ತಾನೆ. ಆ ಮಹಾತ್ಮರನ್ನು ಯಾರು ಮಹಾತ್ಮನೆಂದು ಭಾವಿಸುವು ದಿಲ್ಲವೋ, ಆದಾಗ್ಯೂ ಅವರು ಎಷ್ಟು ದಯಾಳುವೆಂದರೆ-ನನ್ನನ್ನು ಮಹಾತ್ಮನೆಂದು ಭಾವಿಸದಿರಲಿ, ಬೇರೆ ಯಾರನ್ನಾದರೂ ಸಹ ಭಾವಿಸಿ ಕೊಂಡು ತನ್ನ ಆತ್ಮೋದ್ಧಾರ ಮಾಡಿಕೊಳ್ಳಲಿ. ಬೇರೆಯವರನ್ನು ಮಹಾತ್ಮ ರೆಂದು ಭಾವಿಸಿಕೊಂಡು ತನ್ನ ಆತ್ಮೋದ್ಧಾರ ಮಾಡಿಕೊಂಡರೆ ಮಹಾತ್ಮರು ಸಂತೋಷಪಡುತ್ತಾರೆ. ನೀನು ರಾಮನಾಮವನ್ನು ಭಜಿಸು, ಅದರಿಂದ ನಿನ್ನ ಉದ್ಧಾರವಾಗುವುದು ಎಂದು ಯಾರಾದರೂ ಹೇಳುತ್ತಾರೆ, ಆದರೆ ಅವರ ಮಾತಿನಲ್ಲಿ ನಂಬಿಕೆಯಿಲ್ಲ. ಅವನ ನಂಬಿಕೆ ಮಹಾತ್ಮಾ ಗಾಂಧೀಜೀಯಲ್ಲಿದ್ದರೆ ಅವನು ಹೇಳುತ್ತಾನೆ ಗಾಂಧೀಜೀ ರಾಮ-ನಾಮದ ಉಪಾಸನೆ ಮಾಡುತ್ತಿ ದ್ದರು, ಭಕ್ತರಾಗಿದ್ದರು. ನೋಡಿ, ಅವರು ಸ್ವತಃ ಹೇಳಿದ್ದಾರೆ-'ರಾಮನಾಮಕ್ಕೆ ಸಮಾನವಾದದ್ದು ಏನೂ ಇಲ್ಲ'. ಗಾಂಧೀಜೀಯವರನ್ನು ಮಹಾತ್ಮರೆಂದು ಭಾವಿಸಿ ಅವರನ್ನು ಅನುಕರಣೆ ಮಾಡು, ರಾಮ-ನಾಮದ ಭಜನೆ ಮಾಡು. ಗಾಂಧೀಜೀಯವರ ಸಿದ್ಧಾಂತವನ್ನು ಒಪ್ಪಿಕೊಂಡು, ಅವರನ್ನು ಮಹಾತ್ಮರೆಂದು ಭಾವಿಸಿಕೊಂಡು ಗುರುವೆಂದು ಭಾವಿಸಿ ರಾಮ-ನಾಮದ ಉಪಾಸನೆ ಮಾಡಲಾರಂಭಿಸಿದರೆ ಮಹಾತ್ಮರು ಬಹು ಸಂತೋಷಪಡುತ್ತಾರೆ- ಇವನು ಒಳ್ಳೆಯ ಮಾರ್ಗವನ್ನು ಹಿಡಿದನು, ಇವನ ಉದ್ಧಾರವಾಗುವ ಸಂಭವವಿದೆ. ಯಾವ ರೀತಿಯಿಂದಲಾದರೂ ಜೀವಿಗಳ ಉದ್ಧಾರವಾಗಲಿ. ಮಹಾತ್ಮರು ಬಹಳ ದಯಾಳುವಾಗಿರುತ್ತಾರೆ. ಹೇಗೆ ಭಗವಂತನು ದಯಾಳುವಾಗಿದ್ದಾ ನೆಯೋ ಹಾಗೆಯೇ ಆತನ ಅನುಯಾಯಿಯೂ ಸಹ ಭಕ್ತ, ಸಾಧು-ಮಹಾತ್ಮಾ ದಯಾಳು ಆಗಿರುತ್ತಾರೆ. ಆದುದರಿಂದ ಭಗವಂತ ಹೇಳುತ್ತಾನೆ- ಇಂತಹ ದಯಾಳು ನನಗೆ ಪ್ರಿಯರಾಗುತ್ತಾರೆ-

***ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ।***

* * * * *

***ಮಯ್ಯರ್ಪಿತ ಮನೋಬುದ್ಧಿರ್ಯೋ ಮದ್ಭಕ್ತಃ ಸ ಮೇ ಪ್ರಿಯಃ॥***

(ಗೀತಾ ೧೨/೧೩-೧೪)

'ಯಾರು ಎಲ್ಲಾ ಜೀವಿಗಳಲ್ಲಿ ದ್ವೇಷಭಾವವಿಲ್ಲದೆ ಮತ್ತು ಸ್ವಾರ್ಥವಿಲ್ಲದೆ

ಎಲ್ಲರಿಗೂ ಪ್ರೇಮ ಮತ್ತು ಕಾರಣವಿಲ್ಲದೆ ದಯಾಳುವಾಗಿದ್ದಾನೆಯೋ, ನನ್ನಲ್ಲಿ ಮನಸ್ಸು-ಬುದ್ಧಿಗಳನ್ನು ಅರ್ಪಿಸುವ ಆ ನನ್ನ ಭಕ್ತನು ನನಗೆ ಪ್ರಿಯನು'.

'ಅವನು ನನಗೆ ಪ್ರಿಯನು'- ಇದು ಭಗವಂತನ ಭಾವ ಮತ್ತು ಭಕ್ತರ ಭಾವನೆಯೂ ಸಹ ಇದೇ ಆಗಿದೆ. ಆದುದರಿಂದ ಉಚ್ಚ ಶ್ರೇಣಿಯ ಭಕ್ತರೂ ಸಹ ಬಹಳ ಸಂತೋಷಪಡುತ್ತಾರೆ. ಯಾರಾದರೂ ಭಗವಂತನ ಭಕ್ತರಾದರೆ ಅವನನ್ನು ನೋಡಿ ಅವರು ಬಹಳ ಪ್ರಸನ್ನರಾಗುತ್ತಾರೆ. ಅವರು ಹೇಳುತ್ತಾರೆ- ಯಾರನ್ನಾದರೂ ಗುರುವೆಂದು ಭಾವಿಸು, ಮಹಾತ್ಮರೆಂದು ತಿಳಿ. ಆದರೆ ಭಕ್ತಿಯಂತೂ ಭಗವಂತನಲ್ಲಿಯೇ ಅಲ್ಲವೆ ಅವರದು. ನಮ್ಮ ಸ್ವಾಮಿಯದನ್ನೇ ಮಾಡುತ್ತಾರೆ. ಇದೇ ಪ್ರಕಾರ ಯಾರ ಮಾತನ್ನಾದರೂ ಸರಿ ಒಪ್ಪಿಕೊಂಡು ಭಗವಂತನ ಭಕ್ತನಾಗು, ಭಕ್ತಿಯಿಡು. ಭಗವಂತನ ಗಮಾಸ್ತನಾದರೋ ನಮ್ಮ ಒಡೆಯನ ಭಕ್ತನಾದನು ಎಂದು ತಿಳಿದುಕೊಳ್ಳುವನು. ಅವನು ದಳ್ಳಾಳಿ ಯಾಗಿದ್ದುಕೊಂಡು ಭಗವಂತನಲ್ಲಿ ಭಕ್ತಿಯಿಡು ಎಂದು ಪ್ರಯತ್ನ ಮಾಡುತ್ತಾನೆ. ಬೇರೊಬ್ಬ ದಳ್ಳಾಳಿ ಬಂದ ಮತ್ತು ಅವನನ್ನು ಭಗವಂತನ ಭಕ್ತಿಯಲ್ಲಿ ತೊಡಗಿಸಿದನು, ಆಗ ಅವನು ಸಂತೋಷಪಟ್ಟನು. ನನ್ನ ಮೂಲಕವೇ ಆಗಬೇಕೆಂಬುದೇನಿಲ್ಲ. ದಳ್ಳಾಳಿ ಯಾರಾದರೂ ಆಗಬಹುದು. ಅವನು ಭಕ್ತಿಯಿಡುವುದು ಭಗವಂತನಲ್ಲಿಯೇ. ಈ ಪ್ರಕಾರ ಯಾರ ಮಾತನ್ನಾದರೂ ಸರಿ ಅನುಮೋದಿಸಿ ಭಗವಂತನಲ್ಲಿ ಅತ್ಯಾವಶ್ಯಕವಾಗಿ ಭಕ್ತಿಯಿಡಬೇಕು.

ಹರಿಃ ಓಂ ತತ್ಸತ್

✪ ✪ ✪